ಅಚಲ

ಸಂಪುಟ 12
ಸಂಚಿಕೆ 6

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ
ದ್ವೈಮಾಸಿಕ

ಜನವರಿ 1998
ಬೆಂಗಳೂರು

ಚಂದಾ ಮತ್ತು ಲೇಖನಗಳನ್ನು
ಕಳುಹಿಸುವ ವಿಳಾಸ
ಸಂಪಾದಕರು
ಅಚಲ
ಬಿ-30, ರಿಸರ್ವ್ ಬ್ಯಾಂಕ್ ಸ್ಟಾಫ್ ಕ್ವಾರ್ಟರ್ಸ್
1ನೇ ಮುಖ್ಯರಸ್ತೆ, 9ನೇ ಕ್ರಾಸ್
ವಿಜಯನಗರ ಎರಡನೇ ಹಂತ,
ಬೆಂಗಳೂರು - 40 .

ಒಳಪುಟಗಳಲ್ಲಿ



ಬೆಲೆ
ಬಿಡಿ ಪ್ರತಿ - 5 ರೂ.
ವಾರ್ಷಿಕ ಚಂದಾ - 30 ರೂ.
ಅಜೀವ ಚಂದಾ - 250 ರೂ.
(ಸಂಸ್ಥೆಗಳಿಗೆ) - 300 ರೂ.

ಸಂಪಾದಕ ಮಂಡಲಿ
ಎನ್. ಗಾಯತ್ರಿ
ನೇಮಿಚಂದ್ರ, ದೇವಿ
ಡಾ॥ ಬಿ.ಎನ್. ಸುಮಿತ್ರಾಬಾಯಿ
ಶಾಂತಾ ನಾಗರಾಜ್
ಎಚ್.ಎನ್. ಗೀತಾ

ಪ್ರಕಾಶಕರು
ಜಾಗೃತಿ ಮಹಿಳಾ
ಅಧ್ಯಯನ ಕೇಂದ್ರ
ಬೆಂಗಳೂರು

"ಶಾಲಾ ತೋಟ" ಮಕ್ಕಳ ಮಾಸಪತ್ರಿಕೆಯ ಸಂಪಾದಕಿ ಶ್ರೀಮತಿ ಎಚ್.ಎನ್. ಗೀತಾ ಈಗ ಅಚಲ ಸಂಪಾದಕ ಬಳಗಕ್ಕೆ ಸೇರಿದ್ದಾರೆಂದು ತಿಳಿಸಲು ಹರ್ಷಿಸುತ್ತೇವೆ.

-ಸಂ.

ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ದಯವಿಟ್ಟು ಎರಡು ಪ್ರತಿಗಳನ್ನು ಕಳುಹಿಸಬೇಕು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10/= ಬ್ಯಾಂಕ್ ಕಮಿಷನ್ ಸೇರಿಸಿ ಕಳುಹಿಸಬೇಕು

ಎಂ.ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸ ಬೇಕು

ಬದಲಾದ ವಿಳಾಸಗಳನ್ನು ದಯವಿಟ್ಟು ಬರೆದು ತಿಳಿಸಿ.

ಸುವರ್ಣ ಸ್ವಾತಂತ್ರ್ಯದ ಹೊಸ್ತಿಲಲ್ಲಿ ಚುನಾವಣೆ

ಭಾರತದಲ್ಲಿ ಮಹಿಳೆಯರನ್ನು ಸಾಮೂಹಿಕವಾಗಿ ರಾಜಕೀಯಕ್ಕೆ ಎಳೆದದ್ದೇ ಸ್ವಾತಂತ್ರ್ಯ ಚಳುವಳಿಯ ಹಿರಿಮೆಯಾಗಿದೆ. ಈ ಚಳುವಳಿಯಲ್ಲಿ ಭಾಗವಹಿಸಿದ ಮಹಿಳೆಯರು ಮತದಾನದ ಪ್ರಾಮುಖ್ಯತೆಯನ್ನು ಅರಿತಿದ್ದು, ಅದನ್ನು ಒಂದು ಸಶಕ್ತ ಬೇಡಿಕೆಯನ್ನಾಗಿಸಿಕೊಂಡು, ಆ ಹಕ್ಕನ್ನು ಪಡೆಯುವಲ್ಲಿ ಸಫಲರೂ ಆದದ್ದು ಇತಿಹಾಸವಾಗಿದೆ. ಆ ಇತಿಹಾಸದ ಸುವರ್ಣ ಮಹೋತ್ಸವವನ್ನು ಆಚರಿಸುತ್ತಿರುವ ಇಂದು ಚುನಾವಣೆಗಳು ಮಹಿಳೆಯನ್ನು ಕಾಣುತ್ತಿರುವ ಪರಿಯಂತೂ ನಿರುತ್ಸಾಹದಾಯಕವಾಗಿದೆ.

ದೇಶ ಸುವರ್ಣ ಸ್ವಾತಂತ್ರ್ಯೋತ್ಸವವನ್ನು ಆಚರಿಸುತ್ತಿರುವ ಇಂದು ಘೋಷಿಸಿರುವ ಚುನಾವಣೆ ಅಕಾಲಿಕವಾದದ್ದು. ಜನಪರ ಕಾರ್ಯಕ್ರಮಗಳನ್ನು ರೂಪಿಸಲಾಗದ, ಅಧಿಕಾರಕ್ಕಾಗಿ ಕಚ್ಚಾಡುವ ರಾಜಕೀಯ ಪಕ್ಷಗಳ ಕೆಲ ಮುಖಂಡರ ಸ್ವಾರ್ಥದ ಪರಮಾವಧಿಯ ಕಾರಣ ಈ ದೇಶದ ಜನತೆ ಮತ್ತೊಮ್ಮೆ ಮತಗಟ್ಟೆಯತ್ತ ಹೋಗಬೇಕಾಗಿದೆ; ಸುಮಾರು 800 ಕೋಟಿ ರೂಪಾಯಿ ಹಣ ಚುನಾವಣೆಗೆಂದು ವೆಚ್ಚವಾಗಲಿದೆ. ಹಾಗೆಂದು ಮುಂದಿನ ಮುಂಗಡ ಪತ್ರದಲ್ಲಿ ಶ್ರೀಸಾಮಾನ್ಯನ ತಲೆ ಮೇಲೆ ಬೀಳಬಹುದಾದ ತೆರಿಗೆ ಹೊರೆಯನ್ನು ಈಗಲೇ ಊಹಿಸಿಕೊಳ್ಳಬಹುದು.

ಎಲ್ಲಾ ರಾಜಕೀಯ ಪಕ್ಷಗಳೂ ತಮ್ಮದೇ ರೀತಿಯಲ್ಲಿ ಚುನಾವಣಾ ಆಶ್ವಾಸನೆಗಳನ್ನು ಮಂಡಿಸುತ್ತಿವೆ; ಅನೇಕ ವಿಷಯಗಳ ಮೇಲಿನ ತಮ್ಮ ಗಟ್ಟಿ ನಿಲುವುಗಳನ್ನು ಸಡಿಲಿಸಿವೆ; ಸಿನಿಮಾ ತಾರೆಯರಿಗೆ ಟಿಕೆಟ್ ನೀಡಿ ಮತಗಳಿಸುವ ತಂತ್ರ ಹೂಡಿವೆ. ಮಹಿಳೆಯರಿಗೆ ಅಧಿಕಾರ ಸೂತ್ರ ನೀಡಬೇಕು, ಅಂಗನೆಯರಿಗೂ ಸಮಾನ ಅವಕಾಶ ನೀಡುತ್ತೇವೆ ಎಂದೆಲ್ಲಾ ಹೇಳಿ ಬಾಯಿಚಪಲ ತೀರಿಸಿಕೊಳ್ಳುತ್ತಿರುವ ಪಕ್ಷಗಳು ಈ 1998ರ ಲೋಕಸಭಾ ಚುನಾವಣೆಯಲ್ಲಿ ಎಷ್ಟು ಮಹಿಳೆಯರಿಗೆ ಟಿಕೆಟ್ ನೀಡಿವೆ ಎಂಬುದನ್ನು ಪರಿಶೀಲಿಸಿದರೆ ಇವುಗಳ ಆಷಾಢಭೂತಿತನ ಸ್ಪಷ್ಟವಾಗುವುದು.

ಚುನಾವಣೆಯಲ್ಲಿ ಮಹಿಳೆಯರಿಗೆ ಗಮನಾರ್ಹ ಸ್ಥಾನಗಳನ್ನು ನೀಡಲಾಗುವುದು ಎಂಬ ಪಕ್ಷಗಳ ಘೋಷಣೆ ಬರೀ ಭೂಷಣವಾಗಿದೆ. ಮಹಿಳೆಯರ ಕಾನೂನಿನ ಹಕ್ಕು ಹಾಗೂ ಮಹಿಳೆಯರಿಗೆ ಅಧಿಕಾರ ಎಂಬ ಅಂಶಗಳ ಬಗೆಗೆ ತನ್ನ ಕಾರ್ಯಕ್ರಮ ಪಟ್ಟಿಯಲ್ಲಿ ಸ್ಪಷ್ಟವಾಗಿ ಹೇಳಿರುವ ಭಾರತೀಯ ಜನತಾ ಪಕ್ಷವು ಬಿಡುಗಡೆ ಮಾಡಿರುವ 278 ಟಿಕೆಟ್‌ನಲ್ಲಿ 29 ಮಂದಿ ಮಾತ್ರ ಮಹಿಳೆಯರು! (ಈ ಲೇಖನ ಅಚ್ಚಿಗೆ ಹೋಗುವಾಗ ಅಂತಿಮ ಪಟ್ಟಿ ಇರಲಿಲ್ಲ.) ಕಳೆದ ಬಾರಿ ಬಿಜೆಪಿಯ 485 ಸ್ಥಾನಗಳಲ್ಲಿ 31ನ್ನು ಮಾತ್ರ ಮಹಿಳೆಯರಿಗೆ ಬಿಟ್ಟು ಕೊಟ್ಟಿತ್ತು. ಸಿ.ಪಿ.ಐ. ಪಕ್ಷವು ಆರು ಮಹಿಳೆಯರಿಗೆ ಟಿಕೆಟ್ ನೀಡಿದೆ. ಅದು ಒಟ್ಟು 44 ಸ್ಥಾನಗಳಿಗೆ ಸ್ಪರ್ಧಿಸಿದೆ. ಸಿ.ಪಿ.ಎಂ.ನ 72 ಅಭ್ಯರ್ಥಿಗಳಲ್ಲಿ 8 ಮಂದಿ ಮಹಿಳೆಯರು. ಕಾಂಗ್ರೆಸ್‌ನ ಪರಿಸ್ಥಿತಿ ಏನೂ ಅಷ್ಟು ಉತ್ತಮವಲ್ಲ. ಅದು ಸುಮಾರು ಶೇಕಡ 20ರಷ್ಟು ಸ್ಥಾನವನ್ನು ಮಾತ್ರ ಮಹಿಳಾ ಅಭ್ಯರ್ಥಿಗಳಿಗೆ ಬಿಟ್ಟುಕೊಟ್ಟಿದೆ. ಜನತಾದಳದ 124 ಅಭ್ಯರ್ಥಿಗಳಲ್ಲಿ 14 ಮಂದಿ ಮಹಿಳೆಯರು.

ಲೋಕಸಭೆಯಲ್ಲಿ ಮಹಿಳೆಯರಿಗೆ ಶೇಕಡ 33 ರಷ್ಟು ಮೀಸಲು ಸ್ಥಾನಗಳಿರಬೇಕೆಂಬ ಮಸೂದೆಗೆ ಕಳೆದ ಬಾರಿ ಸಂಸತ್ತಿನಲ್ಲಿ ಆದ ಗತಿ ತಿಳಿದದ್ದೇ. ಮೀಸಲು ಮಸೂದೆಯನ್ನು ಖಂಡಿತಾ ಅಂಗೀಕರಿಸುವಂತೆ ಮಾಡುತ್ತೇವೆಂದಿದ್ದ ಅಂದಿನ ಪ್ರಧಾನಿಯ ಮಾತುಗಳು ಇಂದೇನಾಗಿವೆ? ಬಹಳಷ್ಟು ಧುರೀಣರು ಈ ಮಸೂದೆಯನ್ನು ವಿರೋಧಿಸಿದ್ದು ಸತ್ಯ. ಇಡೀ ಮಸೂದೆಯ ವಿಷಯ ನಾನಾರೂಪ ತಳೆದು ನಗೆಪಾಟಲಿಗೆ ಗುರಿಯಾಗಿದ್ದು ಈಗ ಇತಿಹಾಸ. ಲೋಕಸಭೆಯಲ್ಲಿ 'ಮೀಸಲಾತಿಗೆ' ಬೆಂಬಲಿಸದಿದ್ದ ಪಕ್ಷಗಳೆಲ್ಲಾ ಈಗ ಒಕ್ಕೊರಲಿನಿಂದ ತಾವು ಅಧಿಕಾರಕ್ಕೆ ಬಂದರೆ ಮೀಸಲಾತಿ ಮಸೂದೆಯನ್ನು ತರುವುದಾಗಿ ಘೋಷಿಸುತ್ತಾ ಸಮಯಸಾಧಕತನವನ್ನು ಮೆರೆಯುತ್ತಿವೆ.

ಹೀಗಾಗಿ ಜನಸಾಮಾನ್ಯರಲ್ಲಿ ಮತ ಹಾಕುವ ಉತ್ಸಾಹ ಎದ್ದು ಕಾಣುತ್ತಿಲ್ಲ. ಸಿದ್ಧಾಂತವೇ ಇಲ್ಲದ, ಜನಸಂಪರ್ಕವನ್ನೇ ಮಾಡದ, ಜನಹಿತ ಕಾರ್ಯಕ್ರಮಗಳನ್ನೇ ರೂಪಿಸದ ಅಭ್ಯರ್ಥಿಗಳಿದ್ದರೆ ಮತ ಹಾಕುವ ಉತ್ಸಾಹ ಬಂದೀತೆಲ್ಲಿಂದ? ಬಹುಶಃ ಈಗ ರಾಜಕೀಯ ಪಕ್ಷಗಳಿಗೆ ಬೆಲೆ ಏರಿಕೆ, ಉದಾರೀಕರಣ, ಏಕರೂಪ ನಾಗರೀಕ ಸಂಹಿತೆಯಂಥವು ಗಂಭೀರವಾದ ಪ್ರಶ್ನೆಗಳೇ ಅಲ್ಲ. ಅತ್ಯಲ್ಪ ಅವಧಿಯಲ್ಲಿ ಮತ್ತೆ ಮತ ಯಾಚಿಸಲು ಬಂದಿರುವುದರಿಂದ ಅವುಗಳ ಮಂತ್ರ 'ಸ್ಥಿರ ಸರ್ಕಾರ' ಮಾತ್ರವಾಗಿದೆ. ಇದಕ್ಕಾಗಿ ಪ್ರಮುಖ ಪಕ್ಷಗಳ ನಡುವೆ ತೀವ್ರ ಹೋರಾಟ. ಇದು ಬಿಜೆಪಿಯ ಹಿಂದುತ್ವ ಶಕ್ತಿಗಳು ಮತ್ತು ಕಾಂಗ್ರೆಸ್, ಸಂಯುಕ್ತ ರಂಗದ ಧರ್ಮನಿರಪೇಕ್ಷ ಪ್ರಜಾಸತ್ತಾತ್ಮಕ ಶಕ್ತಿಗಳ ನಡುವಣ ಹೋರಾಟವಾಗಿದೆ. 'ಸತಿ'ಯನ್ನು ವೈಭವಿಸಿದ ರಾಮನ ಗುಡಿಕಟ್ಟಲು ಹೊರಟಿರುವವರ ಸ್ತ್ರೀಪರತೆಯ ಕಪಟತೆಯನ್ನು ಇಂದು ಮಹಿಳೆಯರು ಅರಿಯಬೇಕಾಗಿದೆ. ಶಾಬಾನೊ, ರೂಪ್‌ಕನ್ವರರಿಗೆ ನ್ಯಾಯ ಒದಗಿಸಿದ ಸ್ತ್ರೀ ವಿರೋಧಿಗಳ ಹುಂಬತನವನ್ನೂ ಮಹಿಳೆಯರೂ ಅರ್ಥಮಾಡಿಕೊಳ್ಳಬೇಕಾಗಿದೆ. ಈ ರಾಜಕೀಯ ಪಕ್ಷಗಳ ಒಟ್ಟು ಮಾನಸಿಕ ಆಲೋಚನೆಯ ಹಿಂದಿರುವ 'ಹೆಣ್ಣಿನ' ಬಗೆಗಿನ ಚಿಂತನೆಯಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕಾಗಿದೆ. ಹೆಣ್ಣು ಹೆಚ್ಚಾಗಿ ರಾಜಕೀಯವಾಗಿ ಸಂಘಟಿತಳಾಗುವುದರಿಂದ ಮಾತ್ರ ಈ ಪ್ರಕ್ರಿಯೆಗೆ ಚಾಲನೆ ಸಿಕ್ಕೀತು. .

- ಎನ್. ಗಾಯತ್ರಿದೇವಿ

ರುಬ್ಬುಗಲ್ಲು

ಎಲ್ಲ ಜಾಲಾಡಿದೆ
ಅಜ್ಜಿ ಇಟ್ಟ ರುಬ್ಬುಗಲ್ಲಿಗೆ
ಯಾವ ಮೂಲೆಯಲ್ಲಿ
ಹುಡುಕುವುದು ಹೇಗೆ ಬೆಳಕು
ಆದರೂ ಹುಡುಕಿದೆ
ಸಿಕ್ಕಿತು
ಸಿಗದಿರುವುದುಂಟೆ ರುಬ್ಬುಗಲ್ಲು
ಅಜ್ಜಿಯ ನೆನಪೆಲ್ಲ ಧೂಳಾಗಿ
ಕಲ್ಲ ಮೇಲೆ ಕುಳಿತಿತ್ತು

ಮಿಕ್ಸಿ ಇಲ್ಲವೆ ಯಾಕೀ ಅವಾಂತರ
ಅದರಲ್ಲಿ ರುಬ್ಬದ್ದು
ಕಲ್ಲಿನಲಿ ರುಬ್ಬುವುದು
ಏನಿದೆಯೇ ನಿನ್ನಲ್ಲಿ

ರುಬ್ಬುಗಲ್ಲಿನ ಶಕ್ತಿ ಮಿಕ್ಸಿಗೆ
ಎಲ್ಲಿಂದ ಬರಬೇಕು ಹೇಳಿ
ತಡಮಾಡದೆ ಅಣಿಗೊಳಿಸಬೇಕು
ಅಡುಗೆ ಮನೆಗೆ ರುಬ್ಬುಗಲ್ಲು
ಸೇರಿ ಅಜ್ಜಿಯ ನೆನಪು ನಕ್ಕಿತು
ಈಗ
ರುಬ್ಬುವುದಾದರೆ ರುಬ್ಬುವುದು
ಕುಟ್ಟುವುದಾದರೆ ಕುಟ್ಟುವುದು
ಮೈಮನಗಳ ಕಸುವು
ಫಲಿತವಷ್ಟೇ ಮುಖ್ಯ

ವರ್ಷವರ್ಷಗಳಿಂದ ಪ್ರೀತಿಸಿ
ಅದೆಷ್ಟೋ ಬೆಂಚು ಮರ
ಬೀಚು ಪಾರ್ಕೆಂದು ಅಲೆದು
ಮತ್ತೊಬ್ಬಳನ್ನು ತಂದು
ನೇಣುಕಾಣುವಂತೆ ಮಾಡಿದ
ಅವನನ್ನು ರುಬ್ಬಬೇಕು
ರುಬ್ಬಬೇಕು ಬೇಡ ಬೇಡ
ಎಂದೇ ಕಂಡಕಂಡಲ್ಲಿ ಭಾಷಣ
ಬಿಗಿದು ಅವಳ ತಂದೆ ಕಂಡಾಗ
ಹಲ್ಲುಕಿಸಿದು ಲಕ್ಷಗಟ್ಟಲೆ ಪಡೆದು
ಕಾರು ಬಂಗಲೆ ಮಜಭೂತಾದ
ಹುಡುಗ ಅಪ್ಪ ಅಮ್ಮಂದಿರನ್ನೆಲ್ಲ
ನುಣ್ಣಗೆ ಅರೆಯಬೇಕು

ಕಣ್ಣ ಮುಂದೆಯೆ ಸತಿ ಮಾಡಿ
ಇಂದೆಲ್ಲ ಗುಡಿಕಟ್ಟಿ
ಕೈಮುಗಿಯುವ ಮಂದಿಯನ್ನೆಲ್ಲ
ಪತಪತನೆ ರುಬ್ಬುಗಲ್ಲಿಗೆ ಇಕ್ಕಿ
ನಾದುವಂತೆ ಕುಟ್ಟಬೇಕು
ದಿನ ಮುಳುಗಿದರೂ ಮುಗಿಯದು

ಇಂದಿಗೆ ಇಷ್ಟು ಸಾಕು
ಎಲ್ಲವನ್ನು ಕಲಸಿ
ಉಂಡೆ ಮಾಡಿ
ಪಿಂಡದ ಮೂರ್ತಿ ಮಾಡಿ
ತಲೆ ಕಡಿಯಬೇಕೆಂದು
ಊರ ಬಾಗಿಲಿಗೆ ನಿಲ್ಲಿಸಬೇಕು
ಮಾರಿ ತೊಲಗಿಸಬೇಕು.

- ಕವಿತಾ ರೈ ಮಡಿಕೇರಿ

'ಸರ್ವಶುಕ್ಲಾ ಸರಸ್ವತೀ' : ಆನಿ ಬೆಸೆಂಟ್ (1847 - 1933)

ಡಾ। ಜ್ಯೋತ್ಸ್ನಾ ಕಾಮತ್

'ಮತ್ತೆ ಈ ನಾಡಿನಲ್ಲಿ ಜನಿಸುವೆ ! ಹಿಂದುವಾಗಿಯೇ ಹುಟ್ಟಿ ಬರುವೆ!' ಎಂಬ ಅಚಲ ವಿಶ್ವಾಸ ತಾಳಿ ಭಾರತದಲ್ಲಿ ಕೊನೆಯುಸಿರು ಎಳೆದ ಬ್ರಿಟಿಶ್ ಮಹಿಳೆ, ಡಾ। ಆನಿಬೆಸೆಂಟ್; ಹುಟ್ಟು ಹೋರಾಟಗಾತಿ. ತನ್ನ ಬದುಕಿನ ಉತ್ತರಾರ್ಧವನ್ನು ಭಾರತದಲ್ಲಿ ಕಳೆದ ಇವರು ಅಪ್ರತಿಮ ವಾಗ್ಮಿ, ಉತ್ತಮ ಸಂಘಟಕಿ, ಉತ್ಸಾಹಿ ಸಮಾಜ ಸುಧಾರಕಿ, ಅಪರೂಪದ ರಾಜಕಾರಣಿ, ಶ್ರೇಷ್ಠ ಶಿಕ್ಷಣತಜ್ಞೆ ಎಂದೆಲ್ಲ ಹೆಸರುಗಳಿಸಿದವರು.

ಸ್ವಾತಂತ್ರ್ಯ ಚಳುವಳಿ ಶುರುವಾಗುತ್ತಿದ್ದಂತೆ, ಆನಿಬೆಸೆಂಟರ ಮಾರ್ಗದರ್ಶನ ಈ ದೇಶಕ್ಕೆ ಲಭಿಸಿದ್ದು ಭಾರತೀಯರ ಸುದೈವವೆನ್ನಬೇಕು. ಆದರೆ ತಮ್ಮ 45ನೇ ವರ್ಷದಲ್ಲಿ ಇಲ್ಲಿ ಬರುವ ಮೊದಲಿನ ಅವರ ಜೀವನವಾದರೂ ಹಲವಾರು ಸಂಘರ್ಷಗಳಿಂದ ಕೂಡಿದ್ದು ಇತ್ತು. ಮೊದಲ ಸ್ತ್ರೀವಾದ, ಮಹಿಳಾ ಚಳುವಳಿ, ಕಾರ್ಮಿಕ ಕಲ್ಯಾಣ, ಸಮಾಜವಾದದ ಪ್ರಚಾರಗಳಿಂದಾಗಿ ಪಾಶ್ಚಾತ್ಯ ಜಗತ್ತಿನಲ್ಲಿ ಆಗಲೇ ಹೆಸರುವಾಸಿಯಾಗಿದ್ದರು.

ತೀರ ಸಾಮಾನ್ಯ ಐರಿಶ್ ದಂಪತಿಗಳಿಗೆ 1847ರಲ್ಲಿ ಹುಟ್ಟಿದ ಆನಿ, ಹೆಣ್ಣಾಗಿದ್ದರಿಂದ, ಅನೇಕ ಸೌಲಭ್ಯಗಳಿಂದ, ಶಿಕ್ಷಣ ಸೇರಿದಂತೆ, ವಂಚಿತರಾಗಿ ಬೆಳೆದರು. ಇಂಗ್ಲೆಂಡಿನಲ್ಲಿ ಆಗಿನ್ನೂ ಮಹಿಳೆಯರ ಸ್ಥಾನ ನಿಕೃಷ್ಟವಾಗಿತ್ತು. ಆಸ್ತಿಯಲ್ಲಿ ಪಾಲು, ವಿವಾಹ ವಿಚ್ಛೇದ, ಮತದಾನ, ಉಚ್ಚಶಿಕ್ಷಣ ನೀಡುತ್ತಿದ್ದ ವಿಶ್ವವಿದ್ಯಾಲಯಗಳಲ್ಲಿ ಪ್ರವೇಶ ಇವು ಯಾವವೂ ಮಹಿಳೆಗೆ ಎಟಕುತ್ತಿರಲಿಲ್ಲ! ಆನಿ, ಬೆಳೆದ ವಾತಾವರಣ ಇಂತಹದು. ತಮ್ಮ ಇಪ್ಪತ್ತೊಂದನೆಯ ವಯಸ್ಸಿನಲ್ಲಿ ಮದುವೆಯಾಗಬೇಕಾಗಿ ಬಂದಿದ್ದು ಫ್ರಾಂಕ್ ಬೆಸೆಂಟ್ ಎಂಬ ಪಾದ್ರಿಯನ್ನು! ಕ್ರಿಶ್ಚಿಯನ್ ಧರ್ಮಪ್ರಚಾರದಲ್ಲೇ ಆಗಲಿ, ಗಾಸ್ಪೆಲ್ ಬೋಧನೆಯಲ್ಲೇ ಆಗಲಿ ವಿಶ್ವಾಸ ತಾಳದ ಆನಿಗೆ ವಿವಾಹದಲ್ಲಿ ಹೊಂದಾಣಿಕೆ ಸಾಧ್ಯವಾಗಲೇ ಇಲ್ಲ. ಮದುವೆಯಾದ ನಾಲ್ಕಾರು ವರ್ಷಗಳಲ್ಲೇ ಬೇರ್ಪಟ್ಟರು. ವಿವಾಹ ವಿಚ್ಛೇದನೆ ಮತ್ತು 2 ಮಕ್ಕಳ ಕಸ್ಟಡಿ ಸಲುವಾಗಿ ಹೋರಾಡಿದರೂ ಸಫಲತೆ ಲಭಿಸಲಿಲ್ಲ.

ಉಚ್ಚಶಿಕ್ಷಣದ ಸಲುವಾಗಿಯೂ ಹೋರಾಟ ನಡೆಸಿದರು. ಅದರ ಫಲವಾಗಿ ವಿಶ್ವವಿದ್ಯಾಲಯದಲ್ಲಿ ಅವರಿಗೆ ಪ್ರವೇಶವೇನೋ ಸಿಕ್ಕಿತು. ಆದರೆ ಉಪಯೋಗವಾಗಲಿಲ್ಲ, ತನ್ನ ನಾಸ್ತಿಕತೆಯನ್ನು ಆನಿ ಬಹಿರಂಗವಾಗಿ ಸಾರಿದ್ದರು. ಬ್ರಿಟಿಶ್ ವಸಾಹತು ವಾದವನ್ನು ಕಟುವಾಗಿ ಟೀಕಿಸುತ್ತಿದ್ದರು. ಚಾರ್ಲ್ಸ್ ಬ್ರಾಡ್‌ಲಾ (Charles Bradlaugh) ಎಂಬ ಸಮಾಜ ಸುಧಾರಕ, ಭಾರತ ಪ್ರೇಮಿಯೊಂದಿಗೆ ಸೇರಿ 'ನ್ಯಾಶನಲ್ ಸೆಕ್ಯುಲರ್ ಸೊಸೈಟಿ' ಎಂಬ ಸಂಸ್ಥೆ ಕಟ್ಟಿದ್ದರು. ಸಂಪ್ರದಾಯ ಪ್ರೇಮಿ ಬ್ರಿಟಿಶರಿಗೆ ಇವರ ಯಾವ ಚಟುವಟಿಕೆಗಳೂ ಸರಿಬೀಳಲಿಲ್ಲ. ತೇಜೋವಧೆಯ ಅನೇಕ ಪ್ರಸಂಗಗಳನ್ನು ಆನಿಬೆಸೆಂಟ್ ಎದುರಿಸಬೇಕಾಯಿತು. ಅವರ 'ನಾಸ್ತಿಕವಾದ ಹಾಗೂ ಅನೈತಿಕ ವಿಚಾರ'ಗಳಿಂದಾಗಿ ವಿಶ್ವವಿದ್ಯಾಲಯದ ಓದು ಮುಗಿಸಿದರೂ ಡಿಗ್ರಿಯನ್ನು ತಡೆಹಿಡಿಯಲಾಯ್ತು!

ಕಾರ್ಲ್ ಮಾರ್ಕ್ಸ್‌ನ ಸಿದ್ಧಾಂತಗಳು, ವಿವಿಧ ರೂಪಗಳಲ್ಲಿ ನಿಧಾನವಾಗಿ ಯುರೋಪ್-ಅಮೇರಿಕಗಳಲ್ಲಿ ಹರಡಲಾರಂಭಿಸಿದ್ದ ಕಾಲ ಅದು. ಸಮಾಜವಾದದ ತಿಳಿರೂಪ, ಫೇಬಿಯನ್ ಸೋಶ್ಯಾಲಿಸಂ, ಬ್ರಿಟನ್ನಿನ ಧೀಮಂತರನ್ನು ಆಕರ್ಷಿಸಿತ್ತು. ವೆಬ್ (ಸಿಡ್ನಿ ಹಾಗೂ ಬೀಯಾಟ್ರಿಸ್) ದಂಪತಿ, ಜಾರ್ಜ್ ಬರ್ನಾರ್ಡ್‌ಶಾ, ಆನಿಬೆಸೆಂಟ್ ಮೊದಲಾದ ಪ್ರಮುಖರು ಅವರಲ್ಲಿದ್ದರು. ಆನಿಬೆಸೆಂಟ್, ಮಹಿಳಾ ಕಾರ್ಮಿಕರಿಗೆ ಕಡಿಮೆ ಸಂಬಳ ಕೊಡುತ್ತಿದ್ದ ಶೋಷಣೆಯ ಪ್ರಕಾರವನ್ನು ಖಂಡಿಸಿದರು. ಬಾಲ ಕಾರ್ಮಿಕರ ದುಸ್ಥಿತಿಯನ್ನು ಸರಕಾರದ ಗಮನಕ್ಕೆ ತಂದರು. ಬೆಂಕಿಕಡ್ಡಿ ಕಾರ್ಖಾನೆಯ ಕೆಲಸಗಾರರ ಯೂನಿಯನ್ ಕಟ್ಟಿದರು. ಈಸ್ಟ್ ಎಂಡ್ (ಲಂಡನ್ನಯನ ದೀನದಲಿತರ ವಸತಿವಿಭಾಗ) ವಸತಿಗಾರರ ಆರೋಗ್ಯ ಹಾಗೂ ಸೌಕರ್ಯಗಳಿಗಾಗಿ ಹೋರಾಡಿದರು.

ಅಪ್ರತಿಮ ವಾಗ್ಮಿತೆಗೆ ಆನಿಬೆಸೆಂಟ್ ಹೆಸರಾಗಿದ್ದರು. ತಮ್ಮ ಶತಕದ ಇಂಗ್ಲೆಂಡಿನ ಬಹುಶಃ ಯುರೋಪಿನ ಶ್ರೇಷ್ಠ ವಾಗ್ಮಿ! ಎಂದು ಸುಪ್ರಸಿದ್ಧ ನಾಟಕಕಾರ - ಚಿಂತಕ, ಜಾರ್ಜ್ ಬರ್ನಾರ್ಡ್‌ಶಾ, ಅವರ ಬಗ್ಗೆ ಉದ್ಗರಿಸಬೇಕಾದರೆ, ಬೆಸೆಂಟ್ ಅವರ ಭಾಷಾ ಪ್ರಭುತ್ವ, ಚಿಂತನ, ಧ್ವನಿ ಹಾಗೂ ಪ್ರಸ್ತುತೀಕರಣದ, ಅಸಾಮಾನ್ಯ ವೈಖರಿಯ ಕಲ್ಪನೆ ಬಂದೀತು! ಧ್ವನಿವರ್ಧಕಗಳಿಲ್ಲದ ದಿನಗಳಲ್ಲಿ ಸಹಸ್ರಾರು ಜನರ ಸಭೆಗಳಲ್ಲಿ, ಕೊನೆಯ ಸಾಲಿನವರಿಗೂ ಸ್ಪಷ್ಟ ಕೇಳಿಸುವಂತೆ ಮಾತನಾಡುತ್ತಿದ್ದರಂತೆ. ಸಭೆ ಸಣ್ಣದಿದ್ದರೆ ಹಿತಮಿತವಾಗಿ ಇಂಪಾಗಿ, ತನ್ಮಯತೆಯಿಂದ ಆಲಿಸುವಂತೆ ಮೋಡಿ ಮಾಡುತ್ತಿದ್ದರಂತೆ. ಧ್ವನಿಯ ಏರಿಳಿತದ ಮೇಲೆ ಅವರ ಹತೋಟಿ ಅಸಾಮಾನ್ಯವಾಗಿದ್ದು, ಅವರ ಬಳಿಕ ಒಂದೇ ವೇದಿಕೆಯಲ್ಲಿದ್ದ ಇತರರ ಭಾಷಣಗಳು ತೀರ ಸಪ್ಪಗಾಗಿ ಬಿಡುವ ಅವಕಾಶ ಬರುತ್ತಿತ್ತು! ಸ್ವತಃ ಗಾಂಧಿಯವರು ಬೆಸೆಂಟ್‌ರ ವಾಗ್‌ವೈಖರಿ ಕುರಿತು ಮೆಚ್ಚಿಗೆಯಿಂದ ಉದ್ಗರಿಸಿದ್ದಿದೆ.

ಜನನನಿಯಂತ್ರಣ (birth control) ಪ್ರತಿಪಾದಿಸಿದವರಲ್ಲೂ ಮೊದಲಿಗರಾಗಿ ಬೆಸೆಂಟ್ ವಿವಾದಕ್ಕೊಳಗಾದರು. ಚಿಕ್ಕವಯಸ್ಸಿನ ಮದುವೆ ಹಾಗೂ ಬಹುಸಂತಾನ, ಮಹಿಳೆಯ ಆರೋಗ್ಯಕ್ಕೆ ಮಾರಕವೆಂದು ಮನಗಂಡು, 'ಲಾ ಆಫ್ ಪಾಪ್ಯುಲೇಶನ್' ಎಂಬ ಪುಸ್ತಕ ಬರೆದರು. ಅದರಲ್ಲಿ ಭಾರತವು ಈ ಎರಡರಿಂದಾಗಿ ಮಿತಿಮೀರಿದ ಜನಸಂಖ್ಯೆಯ ಪ್ರದೇಶವಾಗಿ ಪರಿಣಮಿಸಿದೆ! ಎಂದೂ ಉಲ್ಲೇಖಿಸಿದ್ದರು. ಮಡಿವಂತಿಕೆಯ ಕವಚವನ್ನು ಧರಿಸಿದ ಆಗಿನ ಇಂಗ್ಲೆಂಡಿಗೆ ಇವರ ಬರವಣಿಗೆ ಅಪಥ್ಯವಷ್ಟೇ ಅಲ್ಲ, ಅಶ್ಲೀಲವಾಗಿ ಕಂಡಿತ್ತು. ಮಕ್ಕಳ ಕಸ್ಟಡಿ, ವಿವಾಹ ವಿಚ್ಛೇದನ ಸುಗಮಗೊಳಿಸುವ ಕಾನೂನು ತರಲು ಕೋರ್ಟಿನ ಮೆಟ್ಟಿಲೇರಿ ಸೋತರೂ ಕೆಚ್ಚೆದೆಯ ಹೋರಾಟಗಾತಿಯೆಂದು ಯುರೋಪಿನಲ್ಲೆಲ್ಲ ಪ್ರಸಿದ್ಧರಾದರು. ಈ ಸಮಯದಲ್ಲಿ ಅವರಿಗೆ ಥಿಯಾಸಫಿಕಲ್ ಸೊಸೈಟಿಯ ಸಂಪರ್ಕ ಒದಗಿತು.

ರಷಿಯನ್ ಮೂಲದ ಹೆಲೆನ್ ಪೆಟ್ರೊವ್ನಾ ಬ್ಲಾವಾಟ್‌ಸ್ಕಿ ಅಮೇರಿಕೆಯಲ್ಲಿ ಕರ್ನಲ್ ಒಲ್ಕಾಟ್‌ರೊಂದಿಗೆ ಸೇರಿ 1875ರಲ್ಲಿ ಥಿಯಾಸಫಿಕಲ್ ಸೊಸೈಟಿಯನ್ನು ಸ್ಥಾಪಿಸಿದರು. ವಿಶ್ವವನ್ನು ನಿಯಂತ್ರಿಸುವ ಅತೀಂದ್ರಿಯ ಶಕ್ತಿಗಳಿದ್ದು, ಅವನ್ನು ಶೋಧಿಸುವ, ಗುರುತಿಸುವ ಗುರಿಯನ್ನು ಸೊಸೈಟಿ ಹೊಂದಿತ್ತು. ಜಾತಿ, ಮತ, ಜನಾಂಗ, ವರ್ಣ, ಲಿಂಗ, ಭೇದಗಳನ್ನು ಪರಿಗಣಿಸದೇ ವಿಶ್ವಭ್ರಾತೃತ್ವವನ್ನು ಸ್ಥಾಪಿಸುವುದು, ವಿಶ್ವಶಾಂತಿಯನ್ನು ಸ್ಥಾಪಿಸಲು ಸಂಘಟಿತ ಪ್ರಯತ್ನ ನಡೆಸುವುದು, ಮುಂತಾದ ಮಾನವ ಕಲ್ಯಾಣದ ಉದಾತ್ತ ತತ್ವಗಳನ್ನು ಸೊಸೈಟಿ ಹೊಂದಿತ್ತು. ರಹಸ್ಯವಾದ ಧ್ಯಾನಗಳಿಗೂ ಪ್ರಾಧಾನ್ಯ ನೀಡಲಾಗಿತ್ತು. ಆದಾಗಲೇ ಮಾನವತೆಯ ಆರಾಧಕಿಯಾಗಿ ರೂಪುಗೊಂಡಿದ್ದ ಆನಿಬೆಸೆಂಟ್ ಈ ಹೊಸ ಪಂಥದ ವಿಚಾರಗಳಿಂದ ಪ್ರಭಾವಿತರಾದರು. ಅವರು ಭಾರತಕ್ಕೆ 1892ರಲ್ಲಿ ಆಗಮಿಸಿದ್ದು ಥಿಯಾಸಾಫಿಸ್ಟ್ ಸೊಸೈಟಿಯ ಸದಸ್ಯರಾಗಿ ಅದರ ಸಾರ್ವತ್ರಿಕ ಪ್ರಚಾರಕ್ಕಾಗಿ.

ಆದರೆ ಭರತಭೂಮಿ, ಈ ಆನಿಮಾತೆಯ ಬಹುಮುಖ ಪ್ರತಿಭೆಯ ಲಾಭವನ್ನು ಪಡೆಯಲು ಅತ್ಯಂತ ಆತುರಳಾಗಿ ಕಾಯುತ್ತಲಿದ್ದಳೋ ಏನೋ! ಬರುತ್ತಿದ್ದಂತೆಯೇ ಹಲಬಗೆಯ ಚಟುವಟಿಕೆಗಳಲ್ಲಿ ಅವರು ತಮ್ಮನ್ನು ತೊಡಗಿಸಿಕೊಂಡರು. ಸೊಸೈಟಿಯ ಕೆಲಸದಿಂದಾಗಿ ಭಾರತದಾದ್ಯಂತ ಕೈಗೊಂಡ ಪ್ರವಾಸ ಅವರಿಗೆ ದೇಶೀಯರ ಮೂಲಭೂತ ಸಮಸ್ಯೆಗಳ ಪ್ರತ್ಯಕ್ಷ ಪರಿಚಯ ನೀಡಿತು. ಯುವಕರಲ್ಲಿ ಆತ್ಮವಿಶ್ವಾಸದ ತೀವ್ರ ಕೊರತೆ, ಜನರಿಗೆ ತಮ್ಮ ದೇಶದ ಸಂಸ್ಕೃತಿಯ, ಹಿರಿಮೆಯ ಕಿಂಚಿತ್ತೂ ಅರಿವು ಇಲ್ಲದಿರುವುದು, ದೇಶಾಭಿಮಾನದ ಕಲ್ಪನೆಯೇ ಇಲ್ಲದ ವಿಚಾರಗಳು ಅವರನ್ನು ತೀವ್ರ ಬಾಧಿಸಿದವು. ಸರಿಯಾದ ಶಿಕ್ಷಣ ಪದ್ಧತಿಯೇ ಈ ವಿಚಾರಗಳನ್ನು ಬಿಂಬಿಸಲು ಸರಿಯಾದ ಕ್ರಮವೆಂದು ಮನಗಂಡು ಶಾಲೆ-ಕಾಲೇಜುಗಳನ್ನು ಸ್ಥಾಪಿಸುವತ್ತ ತಮ್ಮನ್ನು ಕಾಯಾ, ವಾಚಾ, ಮನಸಾ ಅರ್ಪಿಸಿಕೊಂಡರು.

ಶೀಲಸಂವರ್ಧನೆಗೆ ಸಹಾಯ ಮಾಡುವುದೇ ಶಿಕ್ಷಣದ ನಿಜವಾದ ಉದ್ದೇಶವೆಂದು ಅವರು ನಂಬಿದ್ದರು. 'ದೇಶದ ಸಮೃದ್ಧಿ, ಜನತೆಯ ಚಾರಿತ್ರ್ಯದ ಮೇಲೆ ಅವಲಂಬಿಸಿದೆ!' (A nation's prosperity depends upon the character of the people) ಇದು ಅವರ ಘೋಷಣೆಯಾಯಿತು. ಹೆಣ್ಣುಮಕ್ಕಳಿಗೂ ಸೇರಿದಂತೆ ಅನೇಕ ಸ್ಕೂಲು-ಕಾಲೇಜುಗಳ ಸ್ಥಾಪನೆಗೆ ಕಾರಣರಾದರು. ಬನಾರಸದ ಸೆಂಟ್ರಲ್ ಹಿಂದೂ ಕಾಲೇಜನ್ನು ತನ್ನ ನಂಬಿಗೆಯ ವಿಶ್ವಧರ್ಮ, ಜನಾಂಗ ಸಮಾನತೆ ವಿಶ್ವಸಾಹಿತ್ಯ ಪರಿಚಯದ ಜೊತೆಗೆ ಭಾರತೀಯ ಆಧ್ಯಾತ್ಮ, ಸಾಹಿತ್ಯಗಳ ಅಧ್ಯಯನದ ತಳಹದಿಯ ಮೇಲೆ ಸ್ಥಾಪಿಸಿದರು. ವಿಜ್ಞಾನ, ತತ್ವಜ್ಞಾನ, ನೀತಿಶಾಸ್ತ್ರಗಳ ಮೇಲೆ ಒತ್ತು ಕೊಡಲು ಮರೆಯಲಿಲ್ಲ. ಭಾರತೀಯ ಅಧ್ಯಯನಗಳಲ್ಲಿ ಒಲವು ಇದ್ದ ಆಂಗ್ಲರನ್ನು ಬರಮಾಡಿಕೊಂಡು ಭಾರತೀಯ ಅಧ್ಯಾಪಕರೊಂದಿಗೇ ಸಹಜೀವನ ನಡೆಸುವಂತೆ ನೋಡಿಕೊಂಡದ್ದು ಇವರ ಹಿರಿಮೆ. ಇವರು ಪ್ರೋತ್ಸಾಹಿಸಿದ ಆಂಗ್ಲ ಅಧ್ಯಾಪಕರಲ್ಲಿ ಪ್ರಸಿದ್ಧರು ಜಾರ್ಜ್ ಅರುಂಡೇಲ್. ಆ ಬಳಿಕ ಸುಪ್ರಸಿದ್ಧ ನರ್ತಕಿ, ಕಲಾಕ್ಷೇತ್ರದ ಸಂಸ್ಥಾಪಕಿ ಹಾಗೂ ಹಿರಿಯ ಕಲಾಸಾಧಕಿ-ಚಿಂತಕಿಯೆಂದು ರೂಪಗೊಂಡ ರುಕ್ಮಿಣಿಯನ್ನು ಜಾರ್ಜ್ ಅರುಂಡೇಲ್‌ರು ಮದುವೆಯಾದಾಗ ಆಂಗ್ಲ ಭಾರತೀಯ ಸಮಾಜಗಳಲ್ಲಿ ಕೋಲಾಹಲವೇ ಎದ್ದಿತ್ತು! ಬನಾರಸದ ಸೆಂಟ್ರಲ್ ಹಿಂದು ಕಾಲೇಜ್ ಆ ಬಳಿಕ ಪ್ರಸಿದ್ಧ ವಿಶ್ವವಿದ್ಯಾಲಯವಾಗಿ ರೂಪಗೊಂಡಿತು.

ದಿನಕಳೆದಂತೆ ಆನಿಬೆಸೆಂಟ್ ಹೆಚ್ಚೆಚ್ಚು ಭಾರತೀಯ ಭಾಷೆ, ಸಂಸ್ಕೃತಿ, ಧರ್ಮಗಳತ್ತ ಸೆಳೆಯಲ್ಪಟ್ಟರು. ಅವುಗಳ ಕುರಿತಾದ ಆಳವಾದ ಅಧ್ಯಯನದೊಂದಿಗೆ, ಅಮೋಘವಾದ ಭಾಷಣಗಳಲ್ಲಿ ಅವುಗಳ ಅಂಶಗಳನ್ನು ಸೇರಿಸುತ್ತಿದ್ದರು. ಭಾರತೀಯ ಉಡುಗೆ ಸ್ವೀಕರಿಸಿದಂತೆ, ಊಟ-ಉಪಚಾರಗಳಲ್ಲಿ, ವ್ಯವಹಾರದಲ್ಲಿ ಭಾರತೀಯ ರೀತಿ-ನೀತಿಗಳಿಗೆ ಅಪಚಾರವಾಗದಂತೆ ತುಂಬ ಎಚ್ಚರಿಕೆ ವಹಿಸುತ್ತಿದ್ದರು. ಅದರಿಂದಾಗಿ ವಿದ್ಯಾರ್ಥಿಗಳಲ್ಲಿ ಮಹಿಳೆಯರಲ್ಲಿ ಶಿಷ್ಯವರ್ಗದಲ್ಲಿ ತುಂಬ ಜನಪ್ರಿಯರಾದರು. ಸ್ವಂತದ್ದಾದ ಮನೆ, ಆಸ್ತಿ, ಹಣವೆಂಬುದನ್ನು ಅವರೆಂದೂ ಹೊಂದಿರಲಿಲ್ಲ. ಅಸಂಖ್ಯ ಅಭಿಮಾನಿಗಳು, ಸ್ನೇಹಿತರು, ಅವರ ಮಿತವಾದ ಜೀವನ ಮತ್ತೆ ಕೊನೆಯಿಲ್ಲದ ಪ್ರವಾಸಗಳ ಖರ್ಚನ್ನು ಭರಿಸುತ್ತಿದ್ದರು. ತಮ್ಮ ಆಂಗ್ಲ ಹಿನ್ನೆಲೆಯಿಂದ ಪಡೆಯುತ್ತಿದ್ದ ಮೊತ್ತವನ್ನೆಲ್ಲ ಸಮಾಜದ ಸುಧಾರಣೆಗೆ ಬಳಸಿದರು.

ಆನಿಬೆಸೆಂಟ್, ಮಧ್ಯಮಗಾತ್ರದ, ಅತ್ಯಂತ ಸುಂದರಿಯಾದ ಮಹಿಳೆಯಾಗಿದ್ದರು. ಅವರ ಗೌರವರ್ಣ ಬಿಳಿಕೂದಲು, ಶುಭ್ರಬಿಳಿಯ ಸೀರೆ-ಕುಪ್ಪಸ, ಶ್ವೇತ ಕಾಲುಚೀಲ ಹಾಗೂ ಬಿಳಿಯ ಶೂಗಳು ಯಾವುದೇ ಸಭೆಯಲ್ಲಿ ಅವರ ಪಾಂಡಿತ್ಯ-ಗಾಂಭೀರ್ಯಗಳಿಗೆ ಅನುಗುಣವಾಗಿಯೇ ಶೋಭಿಸಿ ವೈಶಿಷ್ಟ್ಯಪೂರ್ಣವಾಗಿರುತ್ತಿದ್ದವು. ಆದರೆ ಅವರು 'ಸರ್ವಶುಕ್ಲಾ ಸರಸ್ವತೀ' ಎಂದು ಖ್ಯಾತರಾದದ್ದು ಉಡುಗೆಯಿಂದ ಮಾತ್ರವಲ್ಲ, ಬನಾರಸದಲ್ಲಿ ನಡೆದ ಸಂಸ್ಕೃತ ವಿದ್ವಾಂಸರ ಒಂದು ಮಹಾಸಭೆಯಲ್ಲಿ ಅವರು ಉಪಸ್ಥಿತರಿದ್ದರು. ಮಹಾಮಹೋಪಾಧ್ಯಾಯ ಗಂಗಾಧರ ಶಾಸ್ತ್ರಿಗಳೆಂಬ ಘನಪಂಡಿತರು ಆನಿಬೆಸೆಂಟರ ವ್ಯಕ್ತಿತ್ವ, ಸಂಸ್ಕೃತದಲ್ಲಿ ಆಸಕ್ತಿ, ಮತ್ತು ಕೇಳಿದ ಚಿಕಿತ್ಸಕ ಪ್ರಶ್ನೆಗಳಿಂದ ಪ್ರಭಾವಿತರಾಗಿದ್ದರು. ವೇದಿಕೆಯ ಮೇಲಿದ್ದಾಗ ಅವರಿಂದ ಹೊರಟ ಉದ್ಗಾರವೇ 'ಸರ್ವಶುಕ್ಲಾ ಸರಸ್ವತೀ'. ಭಾರತೀಯ ವಿದ್ವತ್ ಸಮೂಹ, ಆಂಗ್ಲಸರಸ್ವತಿಯನ್ನು ಸಹಜವಾಗಿ ಗುರುತಿಸಿತು!

ದೇಶವನ್ನೆಲ್ಲ ವ್ಯಾಪಿಸುತ್ತಿದ್ದ ಸ್ವಾತಂತ್ರ್ಯ ಚಳುವಳಿಯಿಂದ, ಭಾರತೀಯರ ಬಗ್ಗೆ ವಿಶೇಷ ಕಳಕಳಿಯಿದ್ದ ಬೆಸೆಂಟ್, ಹೇಗೆ ತಪ್ಪಿಸಿಕೊಂಡಾರು? ಹೋಂ ರೂಲ್ ಲೀಗ್‌ದಲ್ಲಿ ತಿಲಕ್, ಆ ಬಳಿಕ ಜಿನ್ನಾ ಇವರೊಂದಿಗೆ ಸಕ್ರಿಯರಾಗಿದ್ದರು. ತುಂಬ ಕಾಲ ಪರಾಧೀನತೆಯಲ್ಲಿದ್ದ ಭಾರತೀಯರಿಗೆ ಹಂತಹಂತವಾಗಿ ಪ್ರಜಾಸತ್ತೆಯ ರೂಢಿಯಾಗಬೇಕು. ಅದಕ್ಕಾಗಿ ಸ್ಥಾನೀಯ ಆಡಳಿತದಲ್ಲಿ ಅವರು ಹೆಚ್ಚೆಚ್ಚಾಗಿ ಪಾಲುಗೊಳ್ಳುವ ಕ್ರಮದ ಕುರಿತು, ಆನಿಬೆಸೆಂಟ್ ಅವರಿಗೆ ತಮ್ಮವೇ ವಿಚಾರಗಳಿದ್ದವು. ಕಾಂಗ್ರೆಸ್ಸಿಗರಿಗಾದರೂ ಆ ಕಾಲದಲ್ಲಿ ಸಂಪೂರ್ಣ ಸ್ವರಾಜ್ಯದ ಕಲ್ಪನೆ ಒಡಮೂಡಿರಲಿಲ್ಲ. ಇಂಡೋ-ಬ್ರಿಟಿಶ್ ಕಾಮನ್‌ವೆಲ್ತ್ ಎನ್ನುವುದು ರೂಪತಾಳಬೇಕು. ಎಂಪಾಯರ್ ಅಥವಾ ಸಾಮ್ರಾಜ್ಯದ ಕಲ್ಪನೆ ದೂರ ಆಗಬೇಕು. ಭಾರತೀಯರು ಕ್ರಮೇಣ ಹೊಣೆಗಾರ ಸರಕಾರ ರಚಿಸಬೇಕು ಎನ್ನುತ್ತಿದ್ದರು. ಕಾಮನ್‌ವೆಲ್ತ್ ಎಂಬ ಪರಿಕಲ್ಪನೆಯನ್ನು ಆನಿಬೆಸೆಂಟ್ ಮೊದಲ ಬಾರಿಗೆ ಪ್ರತಿಪಾದಿಸಿದರು.

ಸ್ವಾತಂತ್ರ್ಯ ಹೋರಾಟದಲ್ಲಿ ಹೆಚ್ಚೆಚ್ಚು ತೊಡಗಿಕೊಂಡು ಜನಪ್ರಿಯರಾದರು. ಸಹಜವಾಗಿಯೇ 1917ರ ಕಲ್ಕತ್ತೆಯ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರೆಂದು ಪ್ರಚಂಡ ಬಹುಮತದಿಂದ ಆಯ್ಕೆಯಾದರು. ಆ ದಿನಗಳಲ್ಲಿ ಅದು ಅತ್ಯಂತ ಗೌರವದ ಸ್ಥಾನವಾಗಿದ್ದು, ಸರೋಜಿನಿ ನಾಯ್ಡು ಮತ್ತು ನೆಲ್ಲಿ ಸೇನ್‌ಗುಪ್ತ ಮಾತ್ರ ಈ ಗೌರವಕ್ಕೆ ಭಾಜನರಾದ ಇನ್ನಿಬ್ಬರು ಮಹಿಳೆಯರು ಎಂಬುದನ್ನು ಇಲ್ಲಿ ಸ್ಮರಿಸಿಕೊಳ್ಳಬೇಕಾಗಿದೆ.

ಆದರೆ ಗಾಂಧೀಜಿಯವರ ಸತ್ಯ, ಅಹಿಂಸೆ, ಉಪವಾಸ, ಆತ್ಮದಂಡನೆ, ಅಸಹಕಾರಗಳ ರಾಜಕಾರಣ ಅವರಿಗೆ ಸರಿಬೀಳಲಿಲ್ಲ. ಇವು ಇಲ್ಲದೆಯೇ ಶಿಸ್ತು, ಶ್ರಮ, ಸಮಯನಿಷ್ಠೆ, ಪ್ರಾಮಾಣಿಕತೆಗಳನ್ನು ರೂಢಿಸಿಕೊಂಡು ಸಂಘಟಿತ ಹೋರಾಟ ಸಾಧ್ಯ! ಎನ್ನುತ್ತಿದ್ದರು. ಸ್ವಾತಂತ್ರ್ಯ ಪ್ರಾಪ್ತಿ ತಡವಾದರೂ ಅಡ್ಡಿಯಿಲ್ಲ. ಆದರೆ ನಾಡಿನ ಕಾಯ್ದೆ, ಕಾನೂನು ಪಾಲಿಸದೇ ಇರುವುದು ಮೊದಲು ಅಶಿಸ್ತಿಗೆ ದಾರಿ ಮಾಡಿಕೊಡುತ್ತದೆ. ಆ ಬಳಿಕ ಉಚ್ಛೃಂಖಲತೆಗೆ ಅವಕಾಶ ನೀಡಬಹುದು ಎಂಬ ಸಂದೇಹ ವ್ಯಕ್ತಪಡಿಸಿದರು. ವಿದ್ಯಾರ್ಥಿಗಳನ್ನು ರಾಜಕಾರಣಕ್ಕೆ ಎಳೆಯಬಾರದು. ತಮ್ಮ ನಿರ್ಧಾರಗಳಿಗೆ ತಾವೇ ಬಾಧ್ಯಸ್ಥರಾಗುವ ಆತ್ಮವಿಶ್ವಾಸವನ್ನು ಬೆಳೆಸಬೇಕು ಎನ್ನುತ್ತಿದ್ದರು.

ಎಂಭತ್ತು ವರ್ಷಗಳ ಹಿಂದೆ ಅವರು ವ್ಯಕ್ತಪಡಿಸಿದ ಸಂದೇಹ ನಿಜವಾಯಿತು. ಇಂದಿನ ರಾಜಕಾರಣ ಅಧಿಕಾರಾರೂಢರಿಗೆ ಉಚ್ಛೃಂಖಲತೆಗೆ ಅವಕಾಶ ನೀಡಿದೆ, ಎಂಬುದನ್ನು ಸಹಸಾ ಯಾರೂ ಅಲ್ಲಗೆಳೆಯಲಾರರು!

ಪತ್ರಿಕೆಗಳ ಮೂಲಕವೂ ಬೆಸೆಂಟ್, ಬ್ರಿಟಿಶರ ಅಕ್ರಮಗಳನ್ನು ಖಂಡಿಸಿದರು. ರಾಜದ್ರೋಹದ ಆರೋಪಕ್ಕೊಳಗಾಗಿ ಬಂಧನ ಎದುರಿಸಬೇಕಾದರೂ ಜಗ್ಗಲಿಲ್ಲ. ಗಾಂಧೀವಾದವನ್ನು ಪ್ರಶ್ನಿಸಿದ್ದು ಅನೇಕರಿಗೆ ಸರಿಬರಲಿಲ್ಲ ಹಾಗೂ ತಮ್ಮ ವ್ಯಾವಹಾರಿಕ ಸಲಹೆಗಳಿಗೆ ಕಾಂಗ್ರೆಸ್ಸಿಗರು ಒಪ್ಪಿಗೆ ನೀಡದೇ ಇದ್ದದ್ದು ಕಂಡುಕೊಂಡು ಬೆಸೆಂಟ್ ರಾಜಕೀಯದಿಂದ ದೂರವಾದರು. ಆದರೆ ಥಿಯಾಸಫಿಕಲ್ ಸೊಸೈಟಿಯ ಅಧ್ಯಕ್ಷೆ ಆಗಿ, ಶಿಕ್ಷಣಕ್ಷೇತ್ರದಲ್ಲಿ ಪೂರ್ಣತಃ ತೊಡಗಿಸಿಕೊಂಡು ಕೊನೆಯವರೆಗೂ ಸಕ್ರಿಯರಾಗಿ ಬಾಳಿದರು.

ಆನಿಬೆಸೆಂಟರು ಕಾಂಗ್ರೆಸ್ಸಿನಿಂದ ದೂರವಾದರೂ ಪೂರ್ತಿಯಾಗಿ ಅದರ ಪರಲನ್ನು ಹರಿದುಕೊಂಡಿರಲಿಲ್ಲ. ಕಾಂಗ್ರೆಸ್ ಅಧಿವೇಶನಗಳಲ್ಲೆಲ್ಲಾ ತಪ್ಪದೆ ಹಾಜರಿರುತ್ತಿದ್ದರು. 1924ರಲ್ಲಿ ಕರ್ನಾಟಕದ ಬೆಳಗಾಂವಿಯಲ್ಲಿ ಕಾಂಗ್ರೆಸ್ ಅಧಿವೇಶನ ಜರುಗಿದಾಗ ಗಾಂಧಿ ಅಧ್ಯಕ್ಷರಾಗಿದ್ದರು. ಆರೋಗ್ಯ ಸರಿಯಿಲ್ಲದಿದ್ದರೂ ದೀರ್ಘ ಪ್ರವಾಸ ಕೈಗೊಂಡ ಆನಿಬೆಸೆಂಟ್ ಬೆಳಗಾಂವಿಗೂ ಬಂದರು. ಟ್ರೇನ್ ತಡವಾಗಿ ಬಂದು ನೇರ ಸಭೆಗೆ ಆಗಮಿಸಿದರು. ಅವರು ಬರುತ್ತಿದ್ದಂತೆ ಸಭೆಯಲ್ಲಿದ್ದ ಗಾಂಧೀಜಿ ಎದ್ದು ನಿಂತು ಜೊತೆಗೆ ಪ್ರಚಂಡ ಜನಸಮೂಹವು ನಿಂತುಕೊಂಡಿತು; ಅವರನ್ನು ಸ್ವಾಗತಿಸಿತು. ಗಾಂಧಿ ಇತರ ಕಾರ್ಯಕಲಾಪಗಳನ್ನು ಬದಿಗಿರಿಸಿ ಬೆಸೆಂಟರ ಚಿಕ್ಕ ಭಾಷಣಕ್ಕೆ ಅವಕಾಶ ಮಾಡಿಕೊಟ್ಟದ್ದು ಚಾರಿತ್ರಿಕ ಘಟನೆ. ಹೇಳಬೇಕಾದ್ದನ್ನು ಮುಗಿಸಿ ಆನಿಬೆಸೆಂಟ್ ಕೂಡಲೇ ಹೊರಟುಹೋದರು.

ಈ ನೆಲದ ಗುಣವೇ ವಿಚಿತ್ರವಾಗಿದೆಯೋ ಏನೋ! ಮಾನವತಾವಾದಿಯಾಗಿದ್ದ ಆನಿಮಾತೆಯ ವಿಚಾರ, ನಿಲುವುಗಳಲ್ಲಿ ಸ್ಪಷ್ಟಬದಲಾವಣೆ ಕಂಡುಬರಲಾರಂಭಿಸಿತು. ಕ್ರಿಶ್ಚಿಯನ್ ಮತದ ಅವಿಶ್ವಾಸದಿಂದ ತನ್ನ ತಾಯ್ನಾಡಿನಲ್ಲಿ ಅಪ್ರಿಯರಾಗಿದ್ದವರು, ಇಲ್ಲಿ ಬಂದ ಬಳಿಕ ಥಿಯಾಸಫಿಯ ರಹಸ್ಯವಾದದಲ್ಲಿ ಹೆಚ್ಚು ಆಸಕ್ತಿ ಹೊಂದಿದ್ದರು. ಜನನನಿಯಂತ್ರಣದ ಪ್ರಥಮ ಪ್ರತಿಪಾದಕರಾಗಿದ್ದವರು, ಹಿಂದೂಗಳ ಜನ್ಮನಿಷ್ಠೆ, ಪುನರ್ಜನ್ಮದಲ್ಲಿ ವಿಶ್ವಾಸ ತಾಳಿದರು. ಅಲ್ಲದೇ ಇಂಗ್ಲೆಂಡಿಗೆ ಹೋದಾಗ, ತಾನು ಈ ಮೊದಲು ಬರೆದ 'ಲಾ ಆಫ್ ಪಾಪ್ಯುಲೇಶನ್' ಪುಸ್ತಕವನ್ನೆ ಹಿಂದೆಗೆದುಕೊಂಡುಬಿಟ್ಟರು! ಹೆಚ್ಚಿನ ವಿಸ್ಮಯದ ವಿಚಾರವೆಂದರೆ ಅವರ ವಿಶ್ವಗುರು ಹಾಗೂ ಪೂರ್ವದಿಕ್ಕಿನ ತಾರೆಯ ಪರಿಕಲ್ಪನೆ (Order of the star of the East) ದತ್ತು ಮಗ, ಜೆ.ಕೃಷ್ಣಮೂರ್ತಿಗೆ ಬಾಲಕರಾಗಿದ್ದಾಗಿಂದಲೂ ಆಧ್ಯಾತ್ಮಿಕ ಶಿಕ್ಷಣ ಕೊಡಮಾಡಿ ಶ್ರೇಷ್ಠ ಗುರುವನ್ನಾಗಿಸಲು ಯತ್ನಿಸಿದ್ದು, ಅವರ ಅಭಿಮಾನಿಗಳಲ್ಲಿಯೇ ಗೊಂದಲವುಂಟುಮಾಡಿತು. ಜೆ.ಕೃಷ್ಣಮೂರ್ತಿ ಮುಂದೆ ದೊಡ್ಡಚಿಂತಕರಾಗಿ ರೂಪಗೊಂಡರೂ ಬೆಸೆಂಟ್ ತಾಯಿಯ 'ಸ್ಟಾರ್ ಆಫ್ ಈಸ್ಟ್' ಕಲ್ಪನೆಯಲ್ಲಿ ವಿಶ್ವಾಸವಿಡದೇ, ಅದರ ಪ್ರಚಾರಕ್ಕಾಗಿ ಸ್ಥಾಪಿಸಿದ ಸಂಸ್ಥೆಯನ್ನೆ 1929ರಲ್ಲಿ ಭಂಗಗೊಳಿಸಿಬಿಟ್ಟರು! ಇದು, ಮುಪ್ಪಿನಲ್ಲಿ ಆನಿಬೆಸೆಂಟರಿಗೆ ಹೆಚ್ಚಿನ ಆಘಾತವುಂಟುಮಾಡಿದ ಘಟನೆ, ಎನ್ನಲಾಗುತ್ತಿದೆ.

ಕೊನೆಗಾಲದಲ್ಲಿ, . ಕಾಶಿಯಲ್ಲಿ ದೇಹವಿಡಬೇಕು, ತಮ್ಮ ಅಂತ್ಯಕ್ರಿಯೆ ಗಂಗೆಯ ತೀರದಲ್ಲಿ ನೆರವೇರಬೇಕು ಎಂದು ಬೆಸೆಂಟ್ ಬಯಸಿದ್ದರು. ಆದರೆ 1933ರಲ್ಲಿ ಅವರು ನಿಧನ ಹೊಂದಿದ್ದು, ಮದ್ರಾಸಿನ ಅಡ್ಯಾರ್‌ದಲ್ಲಿ. ಆಕಾಶಯಾನ ದೂರವಿದ್ದ ಕಾಲದಲ್ಲಿ ಅವರ ಕೊನೆಯಾಸೆ ಈಡೇರಲಿಲ್ಲ.

ಭಾರತೀಯರನ್ನು, ಭಾರತವನ್ನು ಮನಸಾರೆ ಪ್ರೀತಿಸಿ ಶಿಕ್ಷಣ, ಸಾಮಾಜಿಕ,ರಾಜಕೀಯ ಸುಧಾರಣೆಗಳ ಕ್ಷೇತ್ರಗಳಲ್ಲಿ ಶ್ರಮಿಸಿ, ಪತ್ರಿಕೆ, ಪುಸ್ತಕಗಳಿಂದಲೂ ಜನಜಾಗೃತಿಗಾಗಿ ಪವಣಿಸಿದ ಡಾ। ಆನಿಬೆಸೆಂಟ್ ಅಪೂರ್ವದ ಮಹಿಳೆ. ಯುಗಕ್ಕೊಬ್ಬರು ಇಂಥವರು ಹುಟ್ಟಿ ಖಂಡ, ದೇಶ, ಜಾತಿ, ಜನಾಂಗಗಳ ಭೇದ ಮಾಡದೇ ಮಾನವಹಿತಕ್ಕಾಗಿ ತಮ್ಮ ಬಾಳನ್ನು ಸವೆಸುತ್ತಾರೆ. ಈ ಭಾಗ್ಯ ಭಾರತಕ್ಕೆ ಸಂದಿತು. ಅವರ ಸಹಾಯದಿಂದ, ಅಸಂಖ್ಯ ಎಳೆಯರು, ಸಮಕಾಲೀನ ಧೀಮಂತರಾಗಿ ಇಂಗ್ಲೆಂಡಿನ ಓದೂ ಮುಗಿಸಿ ಕೆಲವರು ಧುರೀಣರಾಗಿಯೂ ರೂಪಗೊಂಡು ಅವರ ಮನೋವೈಶಾಲ್ಯದ, ಬೋಧನಾಕ್ರಮದ ಲಾಭಪಡೆಯುವಂತೆ ಆಯಿತು. ●

'ಜನಪರ ಮೌಲ್ಯಗಳುಳ್ಳದ್ದು' ಜನಪರ ಸಾಹಿತ್ಯವೆಂದು ಗ್ರಹಿಸೋಣ. ಈ ಜನಪರ ಮೌಲ್ಯಗಳನ್ನು ನಿರ್ಧರಿಸುವವರು ಯಾರು? ಬಹುಸಂಖ್ಯಾತ ಓದುಗರೆ? ವಿಮರ್ಶಕರೇ? ತಾತ್ವಿಕ ಚಿಂತಕರೆ? ಬಹುಸಂಖ್ಯಾತ ಓದುಗರೆಂದರೆ, ಜನಪರ ಸಾಹಿತ್ಯ ಜನಪ್ರಿಯಸಾಹಿತ್ಯ ಎಂದು ನಾವು ಒಪ್ಪಬೇಕಾಗುತ್ತದೆ. ಆದರೆ ಜನಪ್ರಿಯ ಸಾಹಿತ್ಯದ ಮೌಲ್ಯಗಳೆಲ್ಲವೂ ಸಾಧಾರಣವಾಗಿ ರೂಢಿಗತ, ಸಾಂಪ್ರದಾಯಿಕ ಮೌಲ್ಯಗಳೇ. ದೇವರಲ್ಲಿ ನಂಬಿಕೆ - ಧೈರ್ಯ ಸಾಹಸಗಳಿಗೆ ಒಲಿಯುವ ಲಕ್ಷ್ಮಿ - ಪತಿಪರಾಯಣೆಯಾದ ಆದರ್ಶ ಭಾರತೀಯ ನಾರಿ - ತ್ಯಾಗಮೂರ್ತಿಯಾದ ಅಮ್ಮ - ಕಾಮದ ಸೋಂಕೂ ಇರದ ಅಮರಪ್ರೇಮ - ದೇಶಭಕ್ತಿ - ಇತ್ಯಾದಿ ಸವಕಲು ಪಡಿಯಚ್ಚುಗಳ ಸುತ್ತಲೇ ಜನಪ್ರಿಯ ಸಾಹಿತ್ಯ ಪುನರಾವರ್ತನೆಗೊಳ್ಳುತ್ತದೆ. ಇದನ್ನು ಜನಪರ ಸಾಹಿತ್ಯವೆನ್ನಲಾಗುವುದಿಲ್ಲ.

– ಸಿ.ಎನ್. ರಾಮಚಂದ್ರನ್

(ಡಾ॥ ತಾಳ್ತಜೆ ವಸಂತಕುಮಾರ್ ಸಂಪಾದಿತ "ಜನಪರ ನಿಲುವು" ಕೃತಿಯಿಂದ)

ಯಶೋಧರಮ್ಮ ದಾಸಪ್ಪ (1905-1981)

ಶ್ರೀಮತಿ ಸರೋಜಿನಿ ಶಿಂತ್ರಿ ಮತ್ತು ಶ್ರೀ ಕೆ. ರಾಘವೇಂದ್ರರಾವ್ ಅವರು ಸಂಪಾದಿಸಿರುವ Women Freedom Fighters in Karnataka ಪುಸ್ತಕದಿಂದ ಆಯ್ದ ಭಾಗ. ಇದರ ಕನ್ನಡರೂಪವನ್ನು ಶ್ರೀಮತಿ ಹೆಚ್.ಎನ್. ಗೀತಾ ಸಿದ್ಧಗೊಳಿಸಿದ್ದಾರೆ.

ಗಾಂಧಿಯುಗಕ್ಕೆ ಸೇರಿದ ಪ್ರಥಮ ಪೀಳಿಗೆಯ ಸ್ವಾತಂತ್ರ್ಯ ಹೋರಾಟಗಾರ್ತಿಯರ ಪೈಕಿ ಯಶೋಧರಮ್ಮನವರದೇ ಒಂದು ವಿಶಿಷ್ಟ ಸ್ಥಾನ. ಅವರ ಚಟುವಟಿಕೆಗಳೆಲ್ಲವೂ ಮೈಸೂರು ರಾಜ್ಯದಲ್ಲೇ ಕೇಂದ್ರೀಕೃತವಾಗಿದ್ದವು ಎಂಬುದೇನೋ ಸರಿಯೇ. ಆದರೂ ಅವರು ಕರ್ನಾಟಕಕ್ಕೇ ಸೇರಿದವರಾಗಿದ್ದರು ಎಂದು ಹೇಳುವುದು ಪ್ರಾಯಶಃ ತಪ್ಪಾದೀತು. ತಮ್ಮದೇ ಒಂದು ರೀತಿಯಲ್ಲಿ ಆಕೆ ಒಬ್ಬ ರಾಷ್ಟ್ರೀಯ ವ್ಯಕ್ತಿಯಾಗಿದ್ದರು;

ಯಶೋಧರಮ್ಮನವರ ಜನನ 1905ನೇ ಇಸವಿಯಲ್ಲಿ ಮೇ ತಿಂಗಳ 28ರಂದು ಆಯಿತು. ಸಮಾಜ ಸೇವಕರೂ, ತತ್ತ್ವಜ್ಞಾನಿಯೂ ಆಗಿದ್ದ ಶ್ರೀ ಕೆ.ಎಚ್. ರಾಮಯ್ಯನವರ ಮೊದಲ ಸಂತಾನವಿದು. ಯಶೋಧರಮ್ಮನವರು ಹುಟ್ಟಿದ ಸಮಯದಲ್ಲಿ ಅವರ ಮನೆ ಸಾಮಾಜಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಇದೇ ಹಿನ್ನೆಲೆಯಲ್ಲಿ ಯಶೋಧರಮ್ಮನವರು ತಂದೆಯಂತೆಯೇ 'ಸಂಘಟನೆ'ಯೇ ಧ್ಯೇಯ ಉಳ್ಳವರಾಗಿ, ನ್ಯಾಯಕ್ಕಾಗಿ ಹೋರಾಡುವ ಮನೋಭಾವ ಹೊಂದಿದ ವರಾಗಿ ಬೆಳೆದರು. ಈ ವಿಷಯದಲ್ಲಿ ಅವರಿಗೆ ತಂದೆಯ ಪ್ರೋತ್ಸಾಹ, ಮಾರ್ಗದರ್ಶನ ಇದ್ದೇ ಇತ್ತು. ತಂದೆಯೂ ಅವರನ್ನು 'ಹುಡುಗ' ನಂತೆಯೇ ಬೆಳೆಸಿದ್ದರು. ಅವರಿಗೆ ಯಾವುದೇ ವಿಷಯಕ್ಕೂ 'ಅಡ್ಡಿ' ಗಳಿರಲಿಲ್ಲ. ಯಾವುದೇ ಅಂಶವನ್ನು ಅವರು ಪ್ರಶ್ನಿಸದೇ, ಹಿಂದೆ ಮುಂದೆ ಆಲೋಚಿಸದೇ ಒಪ್ಪಿಕೊಳ್ಳುತ್ತಿರಲಿಲ್ಲ. ಶಿಸ್ತು ಹಾಗೂ ಹೋರಾಟದ ಮನೋಭಾವ ಅವರಲ್ಲಿ ಮನೆ ಮಾಡಿತ್ತು. ಯಶೋಧರಮ್ಮನವರಿಗೆ ಅವರ ಕುಟುಂಬದಷ್ಟೇ ವಿದ್ಯಾವಂತ ಮತ್ತು ಪ್ರಗತಿಪರ ಕುಟುಂಬದಿಂದ ಬಂದ ಶ್ರೀ ಎಚ್.ಸಿ. ದಾಸಪ್ಪನವರು ಪತಿಯಾಗಿ ಲಭಿಸಿದ್ದು ಅವರ ಅದೃಷ್ಟವೆಂದೇ ಹೇಳಬೇಕು. ಮದುವೆಯಾದಾಗ ಯಶೋಧರಮ್ಮನವರಿಗೆ 21 ವರ್ಷ ಮತ್ತು ದಾಸಪ್ಪನವರಿಗೆ 31 ವರ್ಷ. ಮೂಲತಃ ಹಾಸನದವರಾದ ದಾಸಪ್ಪನವರ ಕುಟುಂಬದವರು ಕೆಚ್ಚೆದೆಯವರ ನಾಡು ಎನಿಸಿದ ಕೊಡಗಿನಲ್ಲಿ ನೆಲಸಿದ್ದರು. ದಾಸಪ್ಪನವರು ಮೈಸೂರಿನಲ್ಲಿ ವಕೀಲಿ ವೃತ್ತಿಯಲ್ಲಿ ತೊಡಗಿದ್ದರು. ಮದುವೆಯ ನಂತರ ಯಶೋಧರಮ್ಮ ನವರೂ ಗಂಡನೊಂದಿಗೆ ಮೈಸೂರಿನಲ್ಲಿ ನೆಲೆಸಿದರು. ಅವರ ಸಾರ್ವಜನಿಕ ಜೀವನ ಅಲ್ಲಿಂದ ಆರಂಭವಾಯಿತು. ದಾಸಪ್ಪ ಕುಟುಂಬ ಮತ್ತು ಮೈಸೂರಿನ ರಾಜ ಪರಿವಾರದವರ ನಡುವೆ ಅನ್ಯೋನ್ಯ ಸ್ನೇಹವಿತ್ತು. ಮೈಸೂರು ರಾಜ್ಯದಲ್ಲಿ ಸ್ವಾತಂತ್ರ್ಯ ಚಳುವಳಿಯನ್ನು ಹೂಡುವುದಕ್ಕೆ ಈ ಗೆಳೆತನ ಏನೂ ಬಾಧಕ ವಾಗಲಿಲ್ಲ. ಅಷ್ಟಕ್ಕೂ ಈ ಹೋರಾಟವಿದ್ದದ್ದು ಬ್ರಿಟೀಷರ ವಿರುದ್ಧವೇ ಹೊರತು ದಯಾಳುಗಳೆನಿಸಿದ್ದ ಮಹಾರಾಜರ ವಿರುದ್ಧ ಅಲ್ಲವಲ್ಲ! ಮಹಾರಾಜರು ಆದಾಗಲೇ ಹರಿಜನೋದ್ಧಾರದತ್ತ ಮತ್ತು ಮಹಿಳೆಯರ ವಿದ್ಯಾಭ್ಯಾಸದತ್ತ ಗಮನ ಹರಿಸಿ, ಕ್ರಮಗಳನ್ನು ತೆಗೆದುಕೊಂಡಿದ್ದರು. ಇದೇ ಕಾರಣಗಳಿಂದಾಗಿ, ಸ್ವಾತಂತ್ರ್ಯ ಚಳುವಳಿಯ ತೀವ್ರತೆ ಬ್ರಿಟಿಷ್ ಭಾರತದಲ್ಲಿದ್ದಷ್ಟು ಮೈಸೂರು ರಾಜ್ಯದಲ್ಲಿರಲಿಲ್ಲ. ಆದಾಗ್ಯೂ, ಹೋರಾಟಗಾರರು ಹಾಗೂ ಸರ್ಕಾರಕ್ಕೂ ಏನಾದರೂ ಮುಖಾಮುಖಿಯಾದಲ್ಲಿ, ಮಹಾರಾಣಿ ಯವರು ಯಾವುದೇ ದುರ್ಘಟನೆ ಅಥವಾ ಅಹಿತಕರ ಪ್ರಸಂಗಗಳಾಗದಿರಲಿ ಎಂದು ದೇವರಿಗೆ ಪೂಜೆ ಸಲ್ಲಿಸುತ್ತಿದ್ದರು. ಒಂದು ಬಾರಿಯಂತೂ ಶ್ರೀ ದಾಸಪ್ಪನವರು ಜೈಲಿನಿಂದ ಬಿಡುಗಡೆ ಹೊಂದಿ ಬಂದಾಗ, ಯುವರಾಜರೇ ಸ್ವತಃ ಖುದ್ದಾಗಿ ಅವರನ್ನು ಸ್ವಾಗತಿಸಿ, ಅರಮನೆಗೆ ಕರೆದುಕೊಂಡು ಹೋದರು. ರಾಜಕುಟುಂಬ ದವರಿಗೆ ಮಹಿಳೆಯರೆಂದರೆ ವಿಪರೀತ ಗೌರವ. ಸಾಧ್ಯವಾದಷ್ಟು ಮಟ್ಟಿಗೆ ಮಹಿಳೆಯರಿಗೆ ನೋವುಂಟು ಮಾಡದಿರುವ, ಅವರನ್ನು ಬಂಧಿಸಬಾರದೆನ್ನುವ ತಮ್ಮ ಇಂಗಿತವನ್ನು ರಾಜಕುಟುಂಬ ವ್ಯಕ್ತ ಪಡಿಸಿತ್ತು.

1938ರ ಏಪ್ರಿಲ್ 10ರಂದು ಶಿವಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನದಲ್ಲಿ ಯಶೋಧರಮ್ಮನವರು ಮೊದಲ ಬಾರಿಗೆ ಸರ್ಕಾರದೊಂದಿಗೆ ವಿರೋಧ ಕಟ್ಟಿಕೊಂಡರು. ಅದು ಮೈಸೂರು ಕಾಂಗ್ರೆಸ್ಸಿನ ಅಧಿವೇಶನವಾಗಿತ್ತು. ಅದುವರೆವಿಗೂ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷ ಭಾರತದ ಪ್ರಜೆಗಳು ದೇಶದ ಇತರೇ ಯಾವುದೇ ರಾಜ್ಯದಲ್ಲಿ ಚಳುವಳಿ ಆರಂಭಿಸಲು ಇನ್ನೂ ಅನುಮತಿ ಕೊಟ್ಟಿರಲಿಲ್ಲ. 1938ರಲ್ಲಿಯೇ ಇದಕ್ಕೂ ಮುಂಚೆ ನಡೆದ ಹರಿಪುರದ ಕಾಂಗ್ರೆಸ್ ಅಧಿವೇಶನದಲ್ಲಿ ಈ ಬಗ್ಗೆ ಬಿರುಸಿನ ಮಾತುಕತೆ ಗಳಾಗಿದ್ದವು. ಆ ಅಧಿವೇಶನದಲ್ಲಿ ಭಾಗವಹಿಸಿದ ನಂತರ ಟಿ. ಸಿದ್ಧಲಿಂಗಯ್ಯ, ಎಚ್.ಸಿ. ದಾಸಪ್ಪ ಮತ್ತು ಸಾಹುಕಾರ್ ಚನ್ನಯ್ಯ ನವರು ಸೇವಾಗ್ರಾಮದಲ್ಲಿ ಗಾಂಧೀಜಿಯವರನ್ನು ಭೇಟಿ ಮಾಡಿ, ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಶಾಖೆಯನ್ನು ಆರಂಭಿಸಲು ಅವರ ಅನುಮತಿ ಪಡೆಯುವ ನಿರ್ಧಾರ ತೆಗೆದುಕೊಂಡರು. ಅದರಂತೆ ಗಾಂಧೀಜಿಯವರನ್ನು ಭೇಟಿ ಮಾಡಿದಾಗ, 'ನಮ್ಮ ಧ್ವಜದ ಗೌರವ-ಘನತೆಯನ್ನು ಕಾಪಾಡುವ ಸಾಮರ್ಥ್ಯವನ್ನು ನೀವೂ ತೋರಲಿಲ್ಲ

ವಲ್ಲ.' ಎಂದು ಅವರು ಹಂಗಿಸಿಯೂ ನುಡಿದರು. ಅವರ ಈ ಹೇಳಿಕೆ 'ನೆಹರೂರವರು ಧರ್ಮಾಂಬುಧಿಯಲ್ಲಿ ಧ್ವಜ ಹಾರಿಸಿದಾಗ ಮೈಸೂರು ಸರ್ಕಾರ ತೋರಿದ ಅದಮರ್ಯಾದೆ' ಘಟನೆಯನ್ನು ಕುರಿತುದಾಗಿತ್ತು. ಆಗ ಟಿ. ಸಿದ್ಧರಾಮಯ್ಯನವರು ಕಾಲಗತಿ ಬದಲಾಗುತ್ತಿದೆ; ಜನರಲ್ಲೂ ಸ್ವಾತಂತ್ರ್ಯದ ಬಗ್ಗೆ ಜಾಗೃತಿ ಮೂಡಿದೆ. ಮೈಸೂರು ಸಹ ರಾಷ್ಟ್ರದ ಮುಖ್ಯವಾಹಿನಿಯಲ್ಲಿ ಬೆರೆತು ಒಂದಾಗ ಬಯಸುತ್ತದೆ ಎಂದು ಒತ್ತಿ ಹೇಳಿದರು. ಸರಿ, ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಶಾಖೆಯನ್ನು ತೆರೆಯಲು ಗಾಂಧೀಜಿಯವರು ಒಪ್ಪಿಕೊಂಡರು. ಹೀಗಾಗಿ, ಅನಂತರ ಶಿವಪುರದಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ, ಶಾಖೆಯ ಪ್ರಥಮ ಅಧಿವೇಶನವಾಗಿ, ವಿಶೇಷ ಮಹತ್ತ್ವಗಳಿಸಿತು. ಈ ಅಧಿವೇಶನ 'ಧ್ವಜ ಸತ್ಯಾಗ್ರಹ'ಕ್ಕೂ ಕಾರಣವಾಯಿತು.

ಮೈಸೂರು ಸರ್ಕಾರಕ್ಕೆ ಈ ಅಧಿವೇಶನದ ವಿರುದ್ಧ ಯಾವುದೇ ವಿರೋಧವಿರಲಿಲ್ಲವಾದರೂ, ರಾಷ್ಟ್ರಧ್ವಜವನ್ನು ಹಾರಿಸುವುದರ ವಿರುದ್ಧ ಇದ್ದೇ ಇತ್ತು. ಧ್ವಜವನ್ನು ಹಾರಿಸಲೆತ್ನಿಸುವ ಯಾವುದೇ ವ್ಯಕ್ತಿಯನ್ನು ಬಂಧಿಸುವುದಾಗಿ ಸರ್ ಮಿರ್ಜಾ ಇಸ್ಮಾಯಿಲ್ ಮತ್ತು ಬ್ರಿಟಿಷ್ ರೆಸಿಡೆಂಟರು ಕಾಂಗ್ರೆಸ್‌ಗೆ ಎಚ್ಚರಿಕೆ ನೀಡಿದ್ದರು. ಯಶೋಧರಮ್ಮ ದಾಸಪ್ಪ ಮತ್ತು ಬಳ್ಳಾರಿ ಸಿದ್ಧಮ್ಮನವರು ಭಾಗವಹಿಸಿದ್ದ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮತ್ತು ಕಾರ್ಯಕರ್ತರ ಜಂಟಿ ಸಭೆಯಲ್ಲಿ ಈ ವಿಷಯವಾಗಿ ಬಿಸಿ ಬಿಸಿ ಚರ್ಚೆ ನಡೆಯಿತು. ಧ್ವಜ ಹಾರಿಸುವ ಆಲೋಚನೆಯನ್ನೇ ಕೈಬಿಟ್ಟರೆ, ಕಡೇ ಪಕ್ಷ ಅಧಿವೇಶನದ ಕಾರ್ಯಕಲಾಪಗಳಾದರೂ ಸುಸೂತ್ರವಾಗಿ ನಡೆಯುತ್ತವೆ ಎಂಬುದು ಕೆಲ ಸದಸ್ಯರ ಅಭಿಪ್ರಾಯವಾಗಿತ್ತು. ಆದರೆ ಶ್ರೀಯುತರುಗಳಾದ ಭಾಷ್ಯಂ, ಎಚ್.ಸಿ. ದಾಸಪ್ಪ ಮತ್ತು ಮೈಸೂರು ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಟಿ. ಸಿದ್ಧಲಿಂಗಯ್ಯನವರೂ ಸೇರಿದರೆ ಬಹುತೇಕ ಮಂದಿ ಸದಸ್ಯರು ಏನೇ ಆಗಲಿ, ಧ್ವಜ ಹಾರಿಸಿಯೇ ತೀರಬೇಕೆಂದು ಒತ್ತಾಯಪಡಿಸಿದರು. ಟಿ. ಸಿದ್ಧಲಿಂಗಯ್ಯನವರು ತಮ್ಮ ಅನುಭವಗಳನ್ನು ನೆನಪು ಮಾಡಿಕೊಳ್ಳುತ್ತಾ 'ಮಹಿಳೆಯರು ಧ್ವಜ ಹಾರಿಸಬೇಕೆಂಬ ಖಚಿತ ನಿಯಮ ತಾಳಿದ್ದರು ಹಾಗೂ ಅದಕ್ಕಾಗಿ ಒತ್ತಾಯಿಸಿದರು' ಎಂದು ಒಂದೆಡೆ ಹೇಳಿದ್ದಾರೆ. (14-8-1976ರ ಡೆಕ್ಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಪ್ರಕಟವಾದ ಡಾ॥ ಸೂರ್ಯನಾಥ ಕಾಮತರ ಲೇಖನದಲ್ಲಿ)

ಬಳ್ಳಾರಿ ಸಿದ್ಧಮ್ಮ ಮತ್ತು ಯಶೋಧರಮ್ಮನವರಂತೂ ಇನ್ನೂ ಒಂದು ಹೆಜ್ಜೆ ಮುಂದೆಯೇ ಇದ್ದರು. ಧ್ವಜ ಹಾರಿಸಲು ಪುರುಷರ್ಯಾರೂ ಮುಂದೆ ಬರದೇ ಇದ್ದಲ್ಲಿ, ಅದನ್ನು ಮಹಿಳೆಯರಿಗೇ ಬಿಟ್ಟುಕೊಡಬೇಕೆಂದು ಅವರು ಹೇಳಿದರು, ಕೊನೆಗೂ ಧ್ವಜ ಹಾರಿಸಬೇಕೆನ್ನುವುದೇ ಖಚಿತವಾಯಿತು. ಅತ್ತ ಸರ್ಕಾರವೂ ಮುನ್ನೆಚ್ಚರಿಕೆಯ ಕ್ರಮವಾಗಿ ನೂರು ಮಂದಿ ರಿಸರ್ವ್ಡ್ ಪೋಲಿಸರನ್ನು ಕರೆಸಿ, ನಿರ್ದಿಷ್ಟ ಸ್ಥಳದ ಸುತ್ತಲೂ ಕಾವಲು ಹಾಕಿತು. ಅಧಿವೇಶನದ ಮೊದಲ ದಿನದಂದು ಧ್ವಜ ಹಾರಿಸುವ ಭಾಗ್ಯ ಟಿ. ಸಿದ್ಧಲಿಂಗಯ್ಯನವರದಾಗಿತ್ತು. ಅವರನ್ನು ತಕ್ಷಣವೇ ಬಂಧಿಸಿಯೂ ಆಯಿತು. ಮರುದಿನದ ಸರದಿ ಎಚ್.ಸಿ. ದಾಸಪ್ಪನವರದು. ಮೂರನೇ ದಿನ, ಈ ಗೌರವ ಬಳ್ಳಾರಿ ಸಿದ್ಧಮ್ಮನವರ ಪಾಲಿನದಾಗಿತ್ತು. ಹೀಗೆ ಎಲ್ಲಾ ಮುಖಂಡರುಗಳ ಬಂಧನವಾಯಿತು. ಸೆರೆಮನೆಗೆ ಹೋಗುವ ಮುನ್ನ ಅವರು 'ಧ್ವಜ ಹಾರಿಸುತ್ತಲೇ ಇರಬೇಕು - ಸತ್ಯಾಗ್ರಹ ಮುಂದುವರಿಸಬೇಕು' ಎಂದು ಕಾರ್ಯಕರ್ತರಿಗೆ ಕರೆ ಇತ್ತರು. ಪ್ರತಿ ಜಿಲ್ಲಾ ಸ್ಥಳದಲ್ಲೂ ತ್ರಿವರ್ಣ ಧ್ವಜವನ್ನು ಹಾರಿಸಬೇಕು ಮತ್ತು ಸತ್ಯಾಗ್ರಹವನ್ನು ಒಂದೊಂದು ವಾರದವರೆಗೆ ನಡೆಸಬೇಕೆಂದೂ ನಿರ್ಧಾರವಾಯಿತು. ಹಾಗೂ ಈ ಧ್ವಜ ಸತ್ಯಾಗ್ರಹವನ್ನು ನಡೆಸುವ ಹೊಣೆ ಯಶೋಧರಮ್ಮನವರದಾಯಿತು. ಅವರು ಟಿ. ಸುನಂದಮ್ಮ, ಸುಬ್ಬಮ್ಮ ಜೋಯಿಸ್, ಸುಶೀಲಮ್ಮ ನಾಗೇಶರಾವ್ ಮತ್ತು ವೆಂಕಮ್ಮ ಸೀತಾರಾಮಯ್ಯನ ವರಂಥ ನಿಷ್ಠಾವಂತ ಕಾರ್ಯಕರ್ತೆಯರೊಡಗೂಡಿ, ಇನ್ನು ಅನೇಕ ಮಂದಿ ಸ್ವಯಂಸೇವಕರನ್ನು ಸಂಘಟಿಸಿ ಧ್ವಜಸ್ತಂಭವನ್ನು ರಕ್ಷಿಸುತ್ತಾ ಅದರ ಬಳಿಯೇ ಕುಳಿತರು. ಪೋಲೀಸರ ಬೆದರಿಕೆಗೆ ಯಾರೂ ಜಗ್ಗಲಿಲ್ಲ. 'ನಮ್ಮ ಮುಖಂಡರುಗಳು ಜೈಲಿಗೆ ಹೋಗಿದ್ದಾರೆ. ನಾವಿಲ್ಲಿಯೇ ಇದ್ದುಕೊಂಡು ಅವರ ಕರ್ತವ್ಯವನ್ನು ನಡೆಸಬೇಕು. ಪ್ರಸಂಗ ಬಂದಲ್ಲಿ ನಮ್ಮ ಪ್ರಾಣ ಹೋದರೂ ಹೋಗಲಿ, ನಾವು ಸಿದ್ಧ. ಮಿರ್ಜಾ ಸಾಹೇಬರು ಊಟಿಯಲ್ಲಿ ತಂಪಾಗಿ ಕುಳಿತು ಮೈಸೂರು ಉರಿಯುವುದನ್ನು ನೋಡಬೇಕೇನು? ಎನ್ನುವುದು ಯಶೋಧರಮ್ಮನವರ ದಿಟ್ಟತನದ ಉತ್ತರವಾಗಿತ್ತು. ಈ ಧ್ವಜ ಸತ್ಯಾಗ್ರಹ ಇಡೀ ಭಾರತದ ಗಮನವನ್ನು ತನ್ನೆಡೆಗೆ ಸೆಳೆದುಕೊಂಡಿತು. ಈ ಚಳುವಳಿಯ ಪರಿಣಾಮ ಏನಾಗುವುದೋ ಏನೋ ಎಂದು ಮಹಾರಾಜರು ಸ್ವತಃ ಬಹಳ ಚಿಂತಿತರಾಗಿದ್ದರು. ಪಡೆಗಳನ್ನು ಉಪಯೋಗಿಸಬೇಕಾಗಿ ಬಂದಲ್ಲಿ ಸಂಯಮದಿಂದ ವರ್ತಿಸಬೇಕೆಂಬ ಸೂಚನೆಯನ್ನು ಅವರು ಅಧಿಕಾರಿಗಳಿಗೆ ನೀಡಿದ್ದರು. ಈ ಸಂದರ್ಭದಲ್ಲಿ ಮೈಸೂರು ರಾಜ್ಯದ ಜನತೆಯಲ್ಲಿ ಹಿಂದೆಂದೂ ಕಂಡಿರದಿದ್ದ ಉತ್ಸಾಹ, ಹುರುಪು ಹುಮ್ಮಸ್ಸು, ಶ್ರದ್ಧೆಗಳಿದ್ದವು. ಯಶೋಧರಮ್ಮ ತಮ್ಮ ನಂಬಿಕಸ್ಥ ಸ್ನೇಹಿತರೊಂದಿಗೆ, ಸಹಕಾರ್ಯಕರ್ತರೊಂದಿಗೆ ಭೂಗತ ಚಟುವಟಿಕೆಗಳಲ್ಲೂ ಮಹತ್ತ್ವದ ಪಾತ್ರ ನಿರ್ವಹಿಸಿದರು. ಪ್ರತಿ ದಿನವೂ ಒಬ್ಬ ಸತ್ಯಾಗ್ರಹಿ ಪುರಸಭೆಯ ಬಳಿ ಧ್ವಜ ಹಾರಿಸಿ, ಭಾಷಣ ಮಾಡಿ ನಂತರ ಬಂಧನಕ್ಕೊಳಗಾಗ ಬೇಕಾಗಿತ್ತು. ಯಶೋಧರಮ್ಮನವರ ಮನೆಯೇ ಚಟುವಟಿಕೆಗಳಿಗೆ ಕೇಂದ್ರಸ್ಥಾನ, ರಾಜ್ಯದ ಎಲ್ಲಾ ಮೂಲೆಗಳಿಂದಲೂ ಸತ್ಯಾಗ್ರಹಿಗಳು ಬರುತ್ತಿದ್ದರು. ಸರ್ಕಾರ ಪುರಸಭೆಯ ಹತ್ತಿರ ಯಾವುದೇ ಸಭೆಗಳನ್ನು ನಿಷೇಧಿಸುತ್ತಿದ್ದರಿಂದ ಅದೇ ಸ್ಥಳದಲ್ಲಿ ಧ್ವಜ ಹಾರಿಸುವುದಕ್ಕೆ ವಿಶೇಷ

ಮಹತ್ತ್ವವಿತ್ತು. ಈ ನಿಷೇಧ ಅಯುಕ್ತವಾದ್ದರಿಂದ ಇದನ್ನು ಪ್ರತಿಭಟಿಸುವ ಸಲುವಾಗಿ ಪ್ರತಿದಿನ ಒಂದು ಸಾಂಕೇತಿಕ ಸಭೆಯನ್ನು ನಡೆಸಿ, ಧ್ವಜವನ್ನು ಹಾರಿಸಬೇಕೆಂಬ ನಿರ್ಧಾರ ಕೈಗೊಳ್ಳಲಾಗಿತ್ತು. ಇದಕ್ಕಾಗಿ ಪರವೂರುಗಳಿಂದ ಬರುತ್ತಿದ್ದ ಸತ್ಯಾಗ್ರಹಿಗಳನ್ನು ಬರಮಾಡಿಕೊಂಡು, ಅವರನ್ನು ಕುಂಬಾರ ಕೊಪ್ಪಲೋ ಅಥವಾ ಸಣ್ಣೇಗೌಡರ ತೋಟದಲ್ಲಿದ್ದ ಅಡಗುತಾಣಗಳಿಗೆ ಕರೆದೊಯ್ಯ ಬೇಕಾಗುತ್ತಿತ್ತು. ಈ ಸಂದರ್ಭಗಳಲ್ಲಿ ತುಳಸೀದಾಸ ದಾಸಪ್ಪ ಮತ್ತು ಟಿ. ಸುಬ್ಬಣ್ಣನವರು ಓಲೆಕಾರರಂತೆ ಕೆಲಸ ಮಾಡಿದರು. ಟಿ. ಸುಬ್ಬಣ್ಣನವರು ತರಕಾರಿ ಮಾರುವವನಂತೆ ವೇಷ ಹಾಕಿಕೊಂಡು ಸತ್ಯಾಗ್ರಹಿಗಳಿಗೆ ಊಟ ಒಯ್ಯುತ್ತಿದ್ದರು. ಯಶೋಧರಮ್ಮ ಸತ್ಯಾಗ್ರಹಿ ಗಳಿಗೆ ಭಾಷಣಗಳನ್ನೂ ಬರೆದುಕೊಡುತ್ತಿದ್ದರು. ಅವರ ಮನೆಯ ಸುತ್ತ ರಾತ್ರಿ ಹೊತ್ತು ಪೋಲೀಸ್ ಪಹರೆ ಇರುತ್ತಿತ್ತು. ಒಂದು ದಿನವಂತೂ ಅವರ ಮನೆಯಲ್ಲಿ ವಿದ್ಯಾರ್ಥಿ ಮುಖಂಡ ಎಂ.ವಿ. ಕೃಷ್ಣಪ್ಪ (ನಂತರ ಲೋಕಸಭಾ ಸದಸ್ಯರಾದವರು)ನವರು ಅಡಗಿರಬಹುದೆಂದು ಶಂಕಿಸಿ, ಪೋಲೀಸರು ದಿಢೀರನೆ ಆಗಮಿಸಿ ಮನೆಯನ್ನೆಲ್ಲಾ ಶೋಧಿಸಿದರು. ಆದರೆ ಅದಕ್ಕೆ ಮುನ್ನಾ ದಿನವೇ ಕೃಷ್ಣಪ್ಪನವರು ಅಲ್ಲಿಂದ ಪಾರಾಗಲು ಯಶೋಧರಮ್ಮನವರು ಸೂಕ್ತ ಏರ್ಪಾಟುಗಳನ್ನು ಮಾಡಿದ್ದರು. ಅದೊಂದು ರೋಮಾಂಚಕಾರಿಯಾದ ಘಟನೆಯಾಗಿತ್ತು. ಅದರ ಬಗ್ಗೆ ಯಶೋಧರಮ್ಮನವರೇ ಹೇಳುವುದನ್ನು ಕೇಳಬೇಕಾಗಿತ್ತು. ಅವರು ಅದನ್ನು ಅನುಭವಿಸಿ ಅನುಭವಿಸಿ ಕಣ್ಣಿಗೆ ಕುಟ್ಟವಂತೆ ಹೇಳುತ್ತಿದ್ದರೆ, ಕೇಳುಗರಿಗೆ ತಾವೂ ಆ ಘಟನೆಗೆ ಸಾಕ್ಷಿಗಳೇನೋ ಎಂದು ಭಾಸವಾಗುತ್ತಿತ್ತು. ಸದ್ದಿಲ್ಲದೆ ಕಾರನ್ನೇರಿ ಸೀಟಿನ ಕೆಳಗೆ ಅಡಗಿ ಕೂರುವಂತೆ ಯಶೋಧರಮ್ಮ ಕೃಷ್ಣಪ್ಪನವರಿಗೆ ಹೇಳಿದರು. ಇತ್ತ ಪಹರೆ ಕಾಯುತ್ತಿದ್ದ ಪೋಲೀಸರಿಗೆ ತಾವು ಹೂವಿಳ್ಯ ಸಮಾರಂಭಕ್ಕೆ ಹೋಗಬೇಕಾಗಿದೆ ಎಂದು ತಿಳಿಸಿದರು. ಅದಕ್ಕೆ ತಕ್ಕಂತೆ ಸೀರೆಗೀರೆ ಉಟ್ಟು, ಕಾರನ್ನೇರಿ, ತಾವು ಹೇಳುವವರೆಗೆ ಎಲ್ಲೂ ನಿಲ್ಲಿಸದೆ ಕುಂಬಾರರ ಕೊಪ್ಪಲಿನ ಕಡೆಗೆ ಕಾರನ್ನು ಪೂರ್ಣ ವೇಗದಲ್ಲಿ ನಡೆಸಬೇಕೆಂದು ಚಾಲಕನಿಗೆ ಆಜ್ಞೆಯಿತ್ತರು. ಕೃಷ್ಣಪ್ಪನವರನ್ನು ಕುಂಬಾರರ ಕೊಪ್ಪಲಿನಲ್ಲಿ ಇಳಿಸಿದ ಯಶೋಧರಮ್ಮ ಹೂವಿಳ್ಯ ಸಮಾರಂಭದಿಂದ ಹಿಂತಿರುಗುವಷ್ಟೇ ನಿರಾತಂಕವಾಗಿ, ಹಗುರ ಮನಸ್ಸಿನಿಂದ ಮನೆಗೆ ಹಿಂತಿರುಗಿದರು. ಆಗ ಕೃಷ್ಣಪ್ಪನವರ ಪತ್ತೆ ನೀಡಿದವರಿಗೆ 5000 ರೂ.ಗಳ ಬಹುಮಾನವನ್ನು ಸರ್ಕಾರ ಘೋಷಿಸಿಯೂ ಇತ್ತು.

ಅದರ ಮರುದಿನವೇ ಯಶೋಧರಮ್ಮನವರ ಮನೆಯನ್ನು ಶೋಧಿಸಲು ಪೋಲೀಸರು ಬಂದದ್ದು. 'ಸತ್ಯಾಗ್ರಹಿಗಳಾಗಿ ನಾವು ನಮ್ಮ ಕರ್ತವ್ಯ ಮಾಡುತ್ತೇವೆ. ನಾವು ನಿಮ್ಮ ಕರ್ತವ್ಯ ಪ್ರಜ್ಞೆಗೂ ಮನ್ನಣೆ ಕೊಡುತ್ತೇವೆ' ಎನ್ನುತ್ತಾ ಯಶೋಧರಮ್ಮ ಅವರನ್ನು ಸ್ವಾಗತಿಸಿದರು. ಆ ವೇಳೆಗಾಗಲೇ, ಯಶೋಧರಮ್ಮನವರು 'ಜ್ವಾಲಾಮುಖಿ'ಯ ಪ್ರತಿಗಳನ್ನು ಸುಟ್ಟು ಹಾಕಿಯೂ ಬಿಟ್ಟಿದ್ದರು ಮತ್ತು ಹಸ್ತಲೇಖನಗಳ ಪ್ರತಿಗಳ ಮುದ್ರಣ ಯಂತ್ರವನ್ನು (cyclostyling machine) ಪೂಜಾ ಕೋಣೆಯಲ್ಲಿ ಅಡಗಿಸಿಯೂ ಇಟ್ಟುಬಿಟ್ಟಿದ್ದರು. ಇಡೀ ಮನೆಯ ಶೋಧನೆ ನಡೆಸಿದ ಪೋಲೀಸರಿಗೆ ಯಾವುದೇ ವಿದ್ರೋಹಕಾರೀ ವಸ್ತುವಾಗಲೀ, ಕೃಷ್ಣಪ್ಪನವರ ಕುರುಹುಗಳಾಗಲೀ ಸಿಗಲಿಲ್ಲ. ಅವರು ಹುಡುಕಾಟ ನಡೆಸದಿದ್ದ ಸ್ಥಳವೆಂದರೆ ದೇವರ ಕೋಣೆಯೊಂದೇ. 'ದೇವರ ಕೋಣೆಯನ್ನು ಪ್ರವೇಶಿಸಲು ಅಭ್ಯಂತರವೇನೂ ಇಲ್ಲ. ಆದರೆ ಗೌರಿ ಪೂಜೆ ಆಗಿದೆ. ನೀವು ಒಳಹೋಗುವುದಿದ್ದರೆ ಪಾದರಕ್ಷೆಗಳನ್ನು ಕಳಚಿ ಹೋಗಿ' ಎಂದು ಯಶೋಧರಮ್ಮ ಹೇಳಿದರು. ಪೋಲೀಸರಿಗೋ ಸಂಧಿಗ್ಧ ಮನಸ್ಸು. ಕೊನೆಗೂ ಅವರಿಗೆ ಒಳ್ಳೆಯ ಬುದ್ಧಿ ಬಂದು, ಒಳಹೋಗುವ ವಿಚಾರ ಕೈಬಿಟ್ಟರು.

ಯಶೋಧರಮ್ಮ ಪೋಲೀಸರನ್ನು ಯಶಸ್ವಿಯಾಗಿ ಮೋಸಗೊಳಿಸಿ ಅವರನ್ನು ಬೇರೆ ದಾರಿಗೆ ಕಳಿಸಿದ್ದರು. ಭೂಗತ ಚಟುವಟಿಕೆಗಳಲ್ಲಿ ಯಶೋಧರಮ್ಮನವರಿಗೆ ಟಿ. ಸುನಂದಮ್ಮ, ಸುಶೀಲಮ್ಮ ನಾಗೇಶರಾವ್, ವೆಂಕಮ್ಮ ಮತ್ತು ಸುಬ್ಬಮ್ಮ ಜೋಯಿಸರ ಸಂಪೂರ್ಣ ಬೆಂಬಲವಿತ್ತು. ಆಗ ಅವರಿಗೆ ಹಣಕಾಸಿನ ತೊಂದರೆಯೂ ಇತ್ತು. ಆದರೆ ತಮ್ಮ ಚಿನ್ನಾಭರಣಗಳನ್ನು ಒತ್ತೆಯಿಟ್ಟು, ಚಳುವಳಿ ನಡೆಯುವಂತೆ ಅವರು ನೋಡಿಕೊಂಡರು.

ಜೈಲುಗಳು ಸತ್ಯಾಗ್ರಹಿಗಳಿಂದ ಭರ್ತಿಯಾದವು. ಸರ್ಕಾರ ಅವರನ್ನು ಹತ್ತಿಕ್ಕುವ ಕ್ರಮಗಳನ್ನು ತೆಗೆದುಕೊಂಡಿತು. ಆದರೆ ಅದರಿಂದ ಜನತೆಯ ಉತ್ಸಾಹವೇನೂ ಕುಂದಲಿಲ್ಲ. ಸರ್ಕಾರ ಸಭೆಗಳನ್ನು ನಿಷೇಧಿಸಿತು. ಆದರೆ ಅದರಿಂದ ಅಂತಹ ಪ್ರಯೋಜನವೇನೂ ಕಾಣಲಿಲ್ಲ. ಹತಾಶೆಗೊಂಡ ಸರ್ಕಾರ 1938ರ ಏಪ್ರಿಲ್ 24ರಂದು ವಿದುರಾಶ್ವತ್ಥದಲ್ಲಿ 20,000 ಮಂದಿಯ ಗುಂಪಿನ ಮೇಲೆ ಗೋಲೀಬಾರ್ ನಡೆಸಿತು. ಇದರಲ್ಲಿ 12ಕ್ಕೂ ಮೀರಿದ ಸಂಖ್ಯೆಯಲ್ಲಿ ಜನ ಸತ್ತರು. ಘಟನಾಸ್ಥಳಕ್ಕೆ ಧಾವಿಸಿದ ಯಶೋಧರಮ್ಮ ಸತ್ತವರ ಕುಟುಂಬಗಳಿಗೆ ನೆರವು ನೀಡಿದರು.

ಹ್ಯಾಮಿಲ್ಟನ್ ರಾಷ್ಟ್ರೀಯ ಚಟುವಟಿಕೆಗಳಲ್ಲಿ ಭಾಗವಹಿಸಿದವರಿಗೆ ಅಮಾನವೀಯವಾದ, ಕ್ರೂರವಾದ ದಂಡನೆ ನೀಡುವುದಕ್ಕೆ ಹೆಸರುವಾಸಿಯಾದವ. ಮೈಸೂರು ನಗರದ ಪೋಲೀಸ್ ಠಾಣೆಯ ಕಟ್ಟಡಕ್ಕೆ ಈತನ ಹೆಸರೇ ಇಡಬೇಕೆಂಬುದು ಸರ್ಕಾರದ ನಿರ್ಧಾರವಾಗಿತ್ತು. ಇದನ್ನು ವಿರೋಧಿಸಿ ಯಶೋಧರಮ್ಮ ಮೆರವಣಿಗೆಯೊಂದನ್ನು ಆಯೋಜಿಸಿದ್ದರು. ಈ ಚಳುವಳಿ 'ಹ್ಯಾಮಿಲ್ಟನ್ ಬಿಲ್ಡಿಂಗ್ ಸತ್ಯಾಗ್ರಹ' ಎಂದೇ ಪ್ರಸಿದ್ಧವಾಯಿತು.

ನಂತರ ಪುರಸಭೆಯಲ್ಲಿ ಯಾವುದೇ ಸಭೆಗಳನ್ನು ನಡೆಸಬಾರದೆಂಬ ನಿಷೇಧವನ್ನು ಸರ್ಕಾರ ಹೇರಿತು. ಯಶೋಧರಮ್ಮ ಅದನ್ನು ವಿರೋಧಿಸಿ 'ಪುರಸಭಾ ಸತ್ಯಾಗ್ರಹ'ವನ್ನು ಆಯೋಜಿಸಿದರು. ಆಗ ಬಹುತೇಕ ಮಂದಿ ಮುಖಂಡರು ಸೆರೆಮನೆಯಲ್ಲಿದ್ದುದರಿಂದ ಯಶೋಧರಮ್ಮನವರು ಮೈಸೂರು ನಗರದ 'ಸರ್ವಾಧಿಕಾರಿ'ಯ ಪಾತ್ರ ನಿರ್ವಹಿಸಬೇಕಾಗಿ ಬಂತು.

ಯಶೋಧರಮ್ಮನವರು ಮೈಸೂರು ರಾಜ್ಯ ಕಾಂಗ್ರೆಸ್‌ನ ಕಾರ್ಯಕಾರಿ ಸಮಿತಿಯ ಪ್ರಥಮ ಮಹಿಳಾ ಸದಸ್ಯರಾಗಿದ್ದರು ಹಾಗೂ ನಂತರ ಅದರ ಪ್ರಥಮ ಮಹಿಳಾ ಅಧ್ಯಕ್ಷರೂ ಆಗಿದ್ದರು. ಅವರು ಪ್ರತಿನಿಧಿಗಳ ಸಭೆಗೆ(?) (House of Representatives) ಕಾಂಗ್ರೆಸ್ ಪಕ್ಷದ ಪ್ರತಿನಿಧಿಯಾಗಿ ಎರಡು ಬಾರಿ ಆಯ್ಕೆಯಾಗಿದ್ದರು. ಎರಡೂ ಪಕ್ಷದ ಪ್ರತಿನಿಧಿಯಾಗಿ ಎರಡು ಬಾರಿ ಆಯ್ಕೆಯಾಗಿದ್ದರು. ಎರಡೂ ಬಾರಿಯೂ ಅವರು ಅರಮನೆಯ ಗುತ್ತಿಗೆದಾರರಾಗಿದ್ದ ತಮ್ಮ ಪ್ರತಿಸ್ಪರ್ಧಿ ಮುನಿವೆಂಕಟಪ್ಪನವರನ್ನು ಸೋಲಿಸಿದ್ದರು. ಯಶೋಧರಮ್ಮನವರಿಗೆ ತೊಂದರೆ ಉಂಟು ಮಾಡುವ ಉದ್ದೇಶದಿಂದ ಮುನಿವೆಂಕಟಪ್ಪ ಚುನಾವಣಾ ಪ್ರಚಾರದ ಸಮಯದಲ್ಲಿ ಮೈಸೂರಿನಲ್ಲಿ ಬಾಡಿಗೆಗೆ ಲಭ್ಯವಿದ್ದ ವಾಹನಗಳನ್ನೆಲ್ಲಾ ಗೊತ್ತು ಮಾಡಿಕೊಂಡು, ತಮ್ಮ ಮನೆಯ ಮುಂದೆ ನಿಲ್ಲಿಸಿಕೊಂಡಿದ್ದರು. ಇದಕ್ಕೆ ಯಶೋಧರಮ್ಮನವರೇನೂ ಕಂಗೆಡಲಿಲ್ಲ. ಸ್ವಯಂಸೇವಕರೊಡನೆ ಮೈಸೂರಿನ ಬೀದಿ ಬೀದಿಗಳಲ್ಲಿ ಕಾಲ್ನಡಿಗೆಯಲ್ಲೇ ಹೋಗಿ ಮತಯಾಚನೆ ಮಾಡಿದರು. ಮೈಸೂರಿನ ಮಹಿಳೆಯರು ಮನೆಗಳಿಂದ ಹೊರಬಂದು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಳ್ಳುವಂತೆ ಮಾಡಿದ್ದು ಯಶೋಧರಮ್ಮ ನವರೇ. ಮಾತನಾಡಿ ಮನ ಒಲಿಸುವ ಕಲೆ ಅವರಿಗಿತ್ತು. ಜೊತೆಗೆ ನಿಷ್ಕಪಟ ಸ್ವಭಾವ, ಪ್ರಚಾರೋತ್ಸಾಹ. ಆ ದಿನಗಳಲ್ಲಿ ಅವರು ಒಂದು ದೊಡ್ಡ ಚೇತನವಾಗಿದ್ದರು. ಆ ನಂತರವೂ ಹಾಗೆಯೇ ಮುಂದುವರಿದರು. ಅವರ ಭಾಷಣಗಳು ಸಣ್ಣ ಸಣ್ಣದಾಗಿರುತ್ತಿದ್ದವು; ಆದರೆ ಅತ್ಯಂತ ಉತ್ಕೃಷ್ಟವೂ ಆಗಿರುತ್ತಿದ್ದವು. ಭಾಷಣದ ಅಂಶಗಳಂತೂ ತಲೆಯ ಮೇಲೆ ಹೊಡೆದು ಹೇಳುವಂತಿರುತ್ತಿದ್ದವು. ಪುರುಷರು ಮಹಿಳೆಯರೆಲ್ಲರೂ ಮಿಸುಕಾಡದೆ ಅವರ ಭಾಷಣಗಳನ್ನು ಎಷ್ಟು ಕಿವಿಗೊಟ್ಟು ಕೇಳುತ್ತಿದ್ದರೆಂದರೆ, ಚಿತ್ರಿತ ಪಾತ್ರಗಳಂತೆ ತೋರುತ್ತಿದ್ದರು.

ಯಶೋಧರಮ್ಮನವರು ಮಹಾತ್ಮಾ ಗಾಂಧಿಯವರಿಂದ ಅತ್ಯಂತ ಪ್ರಭಾವಿತರಾಗಿದ್ದರು. 1944ರಲ್ಲಿ ಅವರು ಸೇವಾಗ್ರಾಮದಲ್ಲೂ ಇದ್ದರು. ಆಗ ಗಾಂಧೀಜಿಯವರು ರಚನಾತ್ಮಕ ಕೆಲಸ ಮಾಡುವಂತೆ ಅವರಿಗೆ ಸಲಹೆ ನೀಡಿದರು. ಅನಂತರ ಅವರು ಕಸ್ತೂರಬಾ ಸ್ಮಾರಕ ದತ್ತಿಯ ಕಾರ್ಯಕ್ರಮಗಳಲ್ಲಿ ಸಮಾಜ ಸೇವೆಯಲ್ಲಿ ತೊಡಗಿಕೊಂಡರು. ಯಶೋಧರಮ್ಮ ಕ್ಯಾಬಿನೆಟ್ ದರ್ಜೆಯ ಪ್ರಥಮ ಮಹಿಳಾ ಸಚಿವೆಯಾಗಿದ್ದರು. ಅವರು ನಿಜಲಿಂಗಪ್ಪನವರ ಮಂತ್ರಿ ಮಂಡಲದಲ್ಲಿದ್ದವರು. ಪಾನನಿರೋಧದ ಬಗ್ಗೆ ಪ್ರಶ್ನೆ ಬಂದಾಗ ತಮ್ಮ ಮಂತ್ರಿ ಪದವಿಯನ್ನು ತ್ಯಜಿಸಿದರು. ಅವರ ನಿಧನದ ಸ್ವಲ್ಪ ಸಮಯ ಮುಂಚಿನವರೆಗೂ ಅವರು ರಾಜ್ಯಮಟ್ಟದ ಪಾನನಿರೋಧ ಸಮಿತಿಯ ಚೇರ್ಮನ್ ಆಗಿದ್ದರು. ವೃದ್ಧಾಪ್ಯ ಅವರ ಎತ್ತರದ ನಿಲುವನ್ನು ತುಸು ಬಗ್ಗಿಸಿತ್ತಾದರೂ, ಅವರ ಹೋರಾಟದ ಮನೋಭಾವವೇನೂ ಬಾಗಿರಲಿಲ್ಲ. ಮಾತುಕತೆ ಮಿದುವಾಗಿತ್ತಾದರೂ, ಸಾರ್ವಜನಿಕ ಜೀವನಗಳಲ್ಲಿ ಬದಲಾಗುತ್ತಿದ್ದ ಮೌಲ್ಯಗಳನ್ನು ಅವಲೋಕಿಸಿದಾಗ ಸಿಡಿದೇಳುತ್ತಿದ್ದರು. ಕೊಂಚ ಶಮನವಾದ ನಂತರ, ದುಃಖಭರಿತರಾಗಿ ಹೇಳುತ್ತಿದ್ದರು- ''ಇಂದಿನ ಆಧುನಿಕ ಸಮಾಜಕ್ಕೆ ನಮ್ಮ ಉಪಸ್ಥಿತಿ ಉಚಿತವೇ? ನಾವು ಒಂದು ಉತ್ತಮ ಕಾರಣಕ್ಕಾಗಿ ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಹೋರಾಡಿದೆವು. ಒಂದು ಅಧಿಕಾರಕ್ಕಾಗಿಯೇ ಆಗಲಿ, ಅಥವಾ ಹುದ್ದೆಗಾಗಲೀ ನಾವು ಕೆಲಸ ಮಾಡಲಿಲ್ಲ. ನಿಜ ಹೇಳಬೇಕೆಂದರೆ, ಬ್ರಿಟಿಷರು ನಮ್ಮ ಜೀವಿತಾವಧಿಯಲ್ಲೇ ಭಾರತವನ್ನು ಬಿಟ್ಟು ಹೋಗುತ್ತಾರೆಂದು ನಾವು ನಿರೀಕ್ಷಿಸಿಯೇ ಇರಲಿಲ್ಲ. ಕೇವಲ ಗಾಂಧೀಜಿಯವರ ಪುಣ್ಯದಿಂದಲೇ ನಮಗೆ ಸ್ವಾತಂತ್ರ್ಯ ಸಿಕ್ಕಿದೆ. ನಮ್ಮ ಹೋರಾಟದಲ್ಲಿ ಗೂಂಡಾಗಿರಿಯ' ಅಂಶವೇ ಇರಲಿಲ್ಲ. ನಮ್ಮ ಶತ್ರುಗಳು ನಮ್ಮ ಪಕ್ಷದತ್ತಲೇ ವಾಲಿ, ನಮಗೆ ಜಯ ದೊರಕಲಿ ಎಂಬ ಗುರಿಯಿಂದ ನಾವು ಎಷ್ಟೆಲ್ಲಾ ಕಷ್ಟಪಟ್ಟೆವು. ಈಗಿನ ಯುವ ಜನಾಂಗದಂತೆ ನಾವು ಯಾವುದೇ ದಾಂಧಲೆ ನಡೆಸಲಿಲ್ಲ. ಮಹಿಳೆಯರೆಂದರೆ ಆಗ ಅಪಾರ ಗೌರವ, ರಕ್ಷಣೆ. ಆದ್ದರಿಂದಲೇ ಅವರುಗಳು ತಮ್ಮ ಮನೆಗಳಿಂದ ಹೊರಬಂದು ಸ್ವಾತಂತ್ರ್ಯ ಚಳುವಳಿಯಲ್ಲಿ ಪಾಲ್ಗೊಳ್ಳಲು ಸಾಧ್ಯವಾಯಿತು. ಇದಕ್ಕೆಲ್ಲಾ ಕಾರಣರಾದವರು ಒಬ್ಬರೇ ಒಬ್ಬರು - ಮಹಾತ್ಮಾ ಗಾಂಧಿ, ಸ್ವತಂತ್ರ ಭಾರತದಲ್ಲಿ ನಾವು ಅವರ ಜೀವವನ್ನು ಕಾಪಾಡ ದಿದ್ದುದು ಎಂಥಾ ಶೋಚನೀಯವಾದ ವಿಷಯ. ಎಂಥಾ ನಾಚಿಕೆಗೇಡಿನ ಸಂಗತಿ. ಈ ದಿನ ಪ್ರತಿಷ್ಠೆಯ ದಿನಗಳು. ಹೆಮ್ಮೆಯ ದಿನಗಳೆಲ್ಲಾ ಕಳೆದುಹೋದ ದಿನಗಳು. ಆಧುನಿಕ ಸಮಾಜದಲ್ಲಿ 'ಮಹಾತ್ಮ'ರಿಗೆ ಉಚಿತ ಸ್ಥಾನವಿಲ್ಲ. ಅವರ ಅನುಯಾಯಿಗಳಾದ ನಮಗೂ ಅಷ್ಟೆ.''

ಯಶೋಧರಮ್ಮನವರು ಸಮಾಜವು ಅಜ್ಞಾನ, ಅನಕ್ಷರತೆ, ಬಡತನ ಮತ್ತು ಕೊಳಕುತನಗಳಿಂದ ಬಿಡುಗಡೆ ಹೊಂದಬೇಕೆಂಬ ಹೋರಾಟವನ್ನು ಮುಂದುವರಿಸಿದರು. ಅವರಿಗೆ 'ಪಾನ ನಿರೋಧ' ಎನ್ನುವುದು ಕೇವಲ ಒಂದು ತತ್ತ್ವವಾಗಿರಲಿಲ್ಲ; ಒಂದು ನಂಬಿಕೆಯಾಗಿತ್ತು. ದುಡಿಯುವ ಮಹಿಳೆಯರಿಗೂ ಅವರು ಹಾಸ್ಟೆಲ್‌ಗಳನ್ನು ನಡೆಸುತ್ತಿದ್ದರು. ದಿಕ್ಕಿಲ್ಲದವರಿಗೆ, ಅಂಗವಿಕಲರಿಗೆ ಆಶ್ರಯಧಾಮಗಳನ್ನೂ ನಡೆಸುತ್ತಿದ್ದರು. ಹರಿಜನರ ಹುಡುಗಿಯೊಂದನ್ನು ಬೆಳೆಸಿ, ದತ್ತು ಸ್ವೀಕಾರ ಮಾಡಿಕೊಂಡಿದ್ದರು.

ಯಶೋಧರಮ್ಮನೊಂದಿಗೆ ಕೆಲಸ ಮಾಡಿದವರೆಲ್ಲಾ ಅವರನ್ನು ಪ್ರೀತಿಯಿಂದ 'ಅಮ್ಮಾ' ಎಂದೇ ಕರೆಯುತ್ತಿದ್ದರು. ●

ಮೀಸಲಾತಿ ಮತ್ತು ಮಹಿಳೆ

-ಶೈಲಜ, ಭದ್ರಾವತಿ

ಇಂದಿನ ಮೀಸಲಾತಿ ಮಸೂದೆಯಲ್ಲಿ ಇರುವ ಶಿಫಾರಸ್ಸುಗಳು :

1. ಲೋಕಸಭಾ ಮತ್ತು ಶಾಸಕಾಂಗಗಳಲ್ಲಿ ಸಂವಿಧಾನ ತಿದ್ದುಪಡಿಯ ಮೂಲಕ ಮಹಿಳೆಗೆ 33% ಮೀಸಲಾತಿ.
2. ಈ ಮೀಸಲಾತಿ ಅನಿರ್ದಿಷ್ಟಕಾಲದವರೆಗೆ ಮುಂದುವರೆಯುತ್ತದೆ. (ದಲಿತರಿಗೆ ನೀಡಿರುವ ಮೀಸಲಾತಿ 10 ವರುಷಗಳಿಗೊಮ್ಮೆ ಮುಂದುವರೆಸದಿದ್ದರೆ ಆಗ ಅದು ಲ್ಯಾಪ್ಸ್ ಆಗುತ್ತದೆ.)
3. ಮೀಸಲು ಕ್ಷೇತ್ರಗಳನ್ನು ಲಾಟರಿಯ ಮೂಲಕ ನಿರ್ಧರಿಸಲಾಗುತ್ತದೆ. ಮತ್ತು ಮೀಸಲು ಕ್ಷೇತ್ರಗಳು ಪ್ರತಿಯೊಂದು ಚುನಾವಣೆಯಲ್ಲೂ ಬದಲಾಗುತ್ತದೆ.
4. ಹಿಂದುಳಿದ ಜಾತಿ ಮತ್ತು ವರ್ಗಗಳಿಗೂ ಸಮಾನಾಂತರವಾಗಿ ಮೂರನೇ ಒಂದು ಭಾಗದಷ್ಟು ಮೀಸಲಾತಿ ಇರುತ್ತದೆ. ಮತ್ತು ಆ ವರ್ಗಕ್ಕೆ ಸೇರಿದ ಮಹಿಳೆಯರಿಗೆ ಅಲ್ಲಿಯೂ ಮೀಸಲಾತಿಯಿರುತ್ತದೆ. ಹಾಗಾಗಿ ಮೀಸಲಾತಿಯೊಳಗೊಂದು ಮೀಸಲಾತಿಯಾಗುತ್ತದೆ.

ಮೀಸಲಾತಿ ಏಕೆ ಬೇಕು ?

1) ರಾಷ್ಟ್ರ ಹಾಗೂ ರಾಜ್ಯದ ರಾಜಕಾರಣದಲ್ಲಿ ಪಾಲಿಸಿ ಮಾಡುವಂತಹ ಹಂತದಲ್ಲಿ ಮಹಿಳಾ ಪ್ರಾತಿನಿಧ್ಯ ಹೆಚ್ಚುಕಡಿಮೆ ಸಂಪೂರ್ಣವಾಗಿ ಇಲ್ಲವಾಗಿದೆ. (ಪಟ್ಟಿ 4 ನೋಡಿ) ಹಾಗಾಗಿ ಮಹಿಳಾಪರ ಕಾಳಜಿ ಹೊಂದಿರುವ ಮತ್ತು ಅವರ ಮೂಲಭೂತ ಅವಶ್ಯಕತೆಗಳನ್ನು ಪೂರೈಸಬಲ್ಲ ವಿಚಾರಗಳನ್ನು ಸಮರ್ಥವಾಗಿ ಆಲೋಚಿಸುವುದು ಕೂಡ ಕಂಡುಬರುತ್ತಿಲ್ಲ. ಆದ್ದರಿಂದ 1990ರ ವಿಶ್ವಸಂಸ್ಥೆಯ ಕಮೀಷನ್ನು ಮಹಿಳೆಯರಿಗೆ ಕಡೇಪಕ್ಷ 30% ಮೀಸಲಾತಿಯನ್ನು ನೀಡಲೇಬೇಕು ಎಂದು ಶಿಫಾರಸ್ಸು ಮಾಡಿತು. ಅವರ ಧ್ವನಿ ಸಶಕ್ತವಾಗದಿದ್ದಲ್ಲಿ ಅವರು ಕೇವಲ ಒಪ್ಪಂದಗಳನ್ನು ಮಾಡಿಕೊಳ್ಳಬೇಕಾಗುತ್ತದೆ ಎಂದಿತು.

2) 1956ರಲ್ಲಿ ಸಂವಿಧಾನದ ಕರಡನ್ನು ಮತ್ತು ಅದಕ್ಕೆ ಏನೇನು ಸೇರಿಸಬೇಕೆಂಬ ಚರ್ಚೆ ಲೋಕಸಭೆಯಲ್ಲಿ ನಡೆಯುತ್ತಿದ್ದಂಥ ಸಂದರ್ಭದಲ್ಲಿ, ಮಹಿಳಾ ಪ್ರಾತಿನಿಧ್ಯವೇ ಇಲ್ಲದಿದ್ದಂಥ ಸಂದರ್ಭದಲ್ಲಿ ಸಂವಿಧಾನ ರೂಪುಗೊಳ್ಳುವ ಮೊದಲು ಮಹಿಳಾ ಪರವಾಗಿ ನಮ್ಮ ಸಂಪ್ರದಾಯದಲ್ಲಿಯೇ ಇದ್ದಂಥ ಅನುಕೂಲತೆಗಳನ್ನು ನಮ್ಮ ಸಂವಿಧಾನಕಾರರು ಕಿತ್ತುಹಾಕಿದರು. ಹಿಂದು ಕಾನೂನನ್ನು ಮಾಡುವ ನೆವದಲ್ಲಿ ಹೆಂಗಸರಿಗಿದ್ದ ಹಲವಾರು ಅನುಕೂಲಗಳು ಇಲ್ಲವಾದವು.

3) ನಮ್ಮ ಸಂವಿಧಾನ ಮಹಿಳೆಗೇ ಮುಖ್ಯವಾಗಿ ಸಂಬಂಧಿಸಿದಂಥ ಕೆಲವು ಕಾನೂನುಗಳನ್ನು ಬಹಳಷ್ಟು ಸಲ ಮಹಿಳೆಯ ಪ್ರಾತಿನಿಧ್ಯವೇ ಇಲ್ಲದೆ ಮಾಡಿದೆ. ಅದರಿಂದಾಗಿ ಅವರು ಅವಳ ಸಮಸ್ಯೆಗಳು ಏನು ಎಂಬುದನ್ನು ತಿಳಿದುಕೊಳ್ಳದೆಯೇ ಕಾನೂನುಗಳನ್ನು ಮಾಡಿ ಅವಳಿಗೆ ಅನುಕೂಲ ಮಾಡಿಕೊಡುವ ಬದಲು ಅವಳ ಬದುಕನ್ನು ಮತ್ತಷ್ಟು ದುರ್ಭರವಾಗುವಂತೆ ಮಾಡಿದ್ದಾರೆ. ಇದಕ್ಕೆ ಅತ್ಯಂತ ಒಳ್ಳೆಯ ಉದಾಹರಣೆಯೆಂದರೆ ವೇಶ್ಯಾವೃತ್ತಿಗೆ ಸಂಬಂಧಿಸಿದ ಮತ್ತು ಅತ್ಯಾಚಾರಕ್ಕೆ ಸಂಬಂಧಿಸಿದ ಕಾನೂನುಗಳು.

ಮೀಸಲಾತಿ ಮತ್ತು ಶಿಕ್ಷಣ

1) ಮೀಸಲಾತಿ ನೀಡಿದರೆ ಸಾಲದು. ತನಗೆ ದೊರಕಿರುವ ಮೀಸಲಾತಿಯನ್ನು ಅರ್ಥಪೂರ್ಣವಾಗಿ ಬಳಸಿಕೊಳ್ಳಬೇಕಾದರೆ ಅವಳಿಗೆ ಶಿಕ್ಷಣ- ಹಾಗೂ ತರಪೇತಿಯ ಅವಶ್ಯಕತೆ ಇದೆ. ಶಿಕ್ಷಣವಿಲ್ಲದಿರುವುದು ಮತ್ತು ಗ್ರಾಮೀಣ ಹಿನ್ನಲೆ ಅವಳಿಗೆ ಬಹಳಷ್ಟು ಸಲ ತುಂಬ ತೊಂದರೆ ಉಂಟುಮಾಡಿದೆ. ಬಹಳಷ್ಟು ಮಹಿಳೆಯರಿಗೆ ಪಂಚಾಯತಿಯ ಮಟ್ಟದಲ್ಲಿ ಅವಿಶ್ವಾಸ ಸೂಚಕ ಗೊತ್ತುವಳಿಯನ್ನು ಮಂಡಿಸಬಹುದೆಂಬ ವಿಷಯವಾಗಲೀ, ಈ ಗೊತ್ತುವಳಿಯ ವಿವರಗಳಾಗಲೀ ತಿಳಿಯದಿರುವುದರಿಂದ ಉನ್ನತಜಾತಿ ಮತ್ತು ವರ್ಗದ ಪುರುಷರು ಈ ಸರಪಂಚರ ವಿರುದ್ಧ ಅವಿಶ್ವಾಸಸೂಚಕ ಗೊತ್ತುವಳಿಯನ್ನು ಮಂಡಿಸಿ ಅವರನ್ನು ಪದಚ್ಯುತಗೊಳಿಸಿರುವ ಸಂದರ್ಭಗಳಿಗೇನು ಕೊರತೆಯಿಲ್ಲ.

2) ಮಹಿಳೆಗೆ ರಾಜಕೀಯವಾಗಿ ಅಧಿಕಾರ ದೊರಕಿರುವುದು ತೀರಾ ಇತ್ತೀಚೆಗೆ. ಹಾಗಾಗಿ ಅವಳಿಗೆ ತನಗೆ ದೊರಕಿರುವ ಅಧಿಕಾರವನ್ನು ಹೇಗೆ ಬಳಸಬೇಕೆಂಬುದಕ್ಕೆ ಯಾವ ಪೂರ್ವಸಿದ್ಧತೆಯನ್ನು ಮತ್ತು ತಯಾರಿಯನ್ನು ಕೊಡದಿದ್ದರೆ ಹೇಗೆ ? ಇವೆರಡೂ ಇಲ್ಲದಿದ್ದಾಗ ಅವಳಿಗೆ ಪೇಚಿನ ಸ್ಥಿತಿ ಉಂಟಾಗುತ್ತದೆ. ಅವರನ್ನು ಬರೀ ಸಾಕ್ಷರರನ್ನಾಗಿ ಮಾಡಿದರೆ ಸಾಲದು ಅವರಿಗೆ ಪ್ರಾಯೋಗಿಕ ಮತ್ತು ಆಡಳಿತಾತ್ಮಕ

ರಾಜಕಾರಣದ ತರಪೇತಿಯನ್ನು ನೀಡಬೇಕು. ಎಷ್ಟೋ ಮಹಿಳೆಯರಿಗೆ ತಮ್ಮ ಸಹಿ ಇನ್ನೊಬ್ಬರು ನಕಲು ಮಾಡದಂತಿರಬೇಕು ಎಂಬುದು ಕೂಡ ತಿಳಿದಿಲ್ಲ.

3) ಸರಿಯಾದ ಶಿಕ್ಷಣ ದೊರಕಿ ತರಪೇತಿಯೂ ದೊರಕಿದ ಕಡೆಗಳಲ್ಲಿ ಅವರಿಂದ ಗಮನಾರ್ಹವಾದ ಕೆಲಸಗಳಾಗಿವೆ. ಮಹಿಳೆಗೆ ತರಪೇತಿ ದೊರಕಿರುವ ಪಶ್ಚಿಮಬಂಗಾಳ ಮಹಾರಾಷ್ಟ್ರ ಮತ್ತು ತ್ರಿಪುರಾದಲ್ಲಿ ತುಂಬಾ ಒಳ್ಳೆಯ ಕೆಲಸಗಳಾಗಿವೆ. ಮಹಾರಾಷ್ಟ್ರದಲ್ಲಿ ಶೇತ್ಕಾರಿ ಮಹಿಳಾ ಸಂಘಟನೆ ಅಘಾಡಿ ಪಂಚಾಯತಿ ಚುನಾವಣೆಯಲ್ಲಿ 9 ಮಹಿಳಾ ಅಭ್ಯರ್ಥಿಗಳನ್ನು ನಿಲ್ಲಿಸಿ ಅದರಲ್ಲಿ ಏಳು ಗುಂಪುಗಳು ಗೆದ್ದವು. ಅವರು ಹೆಂಡದಂಗಡಿಗಳನ್ನು ಮುಚ್ಚಿಸಿದರು. ಶಾಲೆಗೆ ಟೀಚರುಗಳನ್ನು ನೇಮಕ ಮಾಡಿದರು. ಮೇಟಿಖೇಡ ಗ್ರಾಮದಲ್ಲಿ 90 ನಲ್ಲಿಗಳನ್ನು ಹಾಕಿದರು. ಗೋಬರ್ ಅನಿಲ ಪ್ಲಾಂಟ್‌ಗಳನ್ನು ಹಾಕಿದರು. ಮತ್ತು ಚುನಾವಣಾ ಪ್ರಚಾರದ ಸ್ವರೂಪವನ್ನೇ ಬದಲಾಯಿಸಿಬಿಟ್ಟರು. ಹೆಂಡದಂಗಡಿಗಳೆಲ್ಲವನ್ನೂ ಮುಚ್ಚಿಸಿ ಎಲ್ಲಾ ಬಗೆಯ ಅನೈತಿಕ ಪ್ರಚಾರವು ಹೆಚ್ಚು ಕಡಿಮೆ ನಿಂತುಹೋಯಿತು.

4) ಇಲ್ಲಿ ಗಮನಿಸಬೇಕಾದ ಮತ್ತೊಂದು ಕುತೂಹಲಕಾರಿ ಅಂಶವೆಂದರೆ, ಶಿಕ್ಷಣ ನೀಡಿದಾಗ ಮಹಿಳೆಯು ತನ್ನ ಕಾರ್ಯಕ್ಷೇತ್ರದಲ್ಲಿ ಸಮರ್ಥವಾಗಿ ಕೆಲಸಮಾಡುವುದು ಸರಿಯಾದರೂ ಮಹಿಳಾ ಸಾಕ್ಷರತೆ ಮತ್ತು ಸುಶಿಕ್ಷತೆ ತೀರಾ ಹೆಚ್ಚಿನ ಮಟ್ಟದಲ್ಲಿ ಇರುವ ಕಡೆಗಳಲ್ಲೆಲ್ಲಾ ರಾಜಕೀಯದಲ್ಲಿ ಮಹಿಳೆ ಸಕ್ರಿಯವಾಗಿ ಭಾಗವಹಿಸುತ್ತಿಲ್ಲ. ಇನ್ನೂ ಕೌತುಕದ ವಿಚಾರವೆಂದರೆ ಶಿಕ್ಷಣ ತೀರಾ ಕಡಿಮೆ ಇರುವ ಸ್ಥಳಗಳಲ್ಲಿ ರಾಜಕೀಯದಲ್ಲಿ ಮಹಿಳೆಯು ಹೆಚ್ಚು ಸಕ್ರಿಯವಾಗಿ ಭಾಗವಹಿಸುತ್ತಿದ್ದಾಳೆ. ಕೇರಳ ಮತ್ತು ರಾಜಾಸ್ಥಾನದಲ್ಲಿ ಸಾಕ್ಷರತೆಯ ಪ್ರಮಾಣವು ಪರಸ್ಪರ ವಿರುದ್ಧವಾಗಿದೆ. ಕೇರಳದಲ್ಲಿ ಮಹಿಳಾ ಸಾಕ್ಷರತೆ 86% ಇದ್ದರೆ, ರಾಜಾಸ್ಥಾನದಲ್ಲಿ ಕೇವಲ 12% ಇದೆ. ಕೇರಳದಲ್ಲಿ ಸಾಮಾಜಿಕವಾಗಿ ಮಾತೃಪ್ರಧಾನ ಕೌಟುಂಬಿಕ ವ್ಯವಸ್ಥೆ ಇದೆ. ಆದರೆ ರಾಜಸ್ಥಾನದಲ್ಲಿ ದಮನಾತ್ಮಕ ಪುರುಷಪ್ರಧಾನ ವ್ಯವಸ್ಥೆ ಇದೆ ಮತ್ತು ಆತಂಕಕಾರಿಯಾಗುವ ಮಟ್ಟಿಗೆ ಬಾಲ್ಯವಿವಾಹ ಚಾಲ್ತಿಯಲ್ಲಿದೆ. ಆದರೆ ಕೇರಳದ ರಾಜಕೀಯದಲ್ಲಿ ಮಹಿಳೆಯ ಪಾತ್ರ ಕೇವಲ 6% ಇದೆ. ಆದರೆ ರಾಜಸ್ಥಾನದಲ್ಲಿ ಅದು 8% ಇದೆ. ಇದೇ ರೀತಿ ಮಣಿಪುರ ಮತ್ತು ನಾಗಾಲ್ಯಾಂಡುಗಳಲ್ಲಿ ಮಹಿಳೆಯ ಸ್ಥಿತಿ ಉತ್ತಮವಾಗಿದ್ದರೂ ರಾಜಕೀಯದಲ್ಲಿ ಅವರ ಸಂಖ್ಯೆ ಕಡಿಮೆ ಇದೆ. ಉತ್ತರಪ್ರದೇಶ, ಬಿಹಾರ ಮತ್ತು ಮಧ್ಯಪ್ರದೇಶದಲ್ಲಿ ಮಹಿಳೆಯರು ಸಾಕ್ಷರರೂ ಅಲ್ಲ ಜೊತೆಗೆ ಅತ್ಯಂತ ದಮನಕಾರಿ ಸನ್ನಿವೇಶದಲ್ಲಿ ಬದುಕುತ್ತಿದ್ದಾರೆ. ಆದರೆ. ಸಾಪೇಕ್ಷವಾಗಿ ಹೆಚ್ಚಿನವರು ರಾಜಕೀಯದಲ್ಲಿ ಭಾಗವಹಿಸುತ್ತಿದ್ದಾರೆ. ಲೋಕಸಭೆಗೆ ಕೂಡ ಹೆಚ್ಚಿನ ಶಾಸಕರನ್ನು ಕಳಿಸಿರುವವರು ಇವರೇ ಆಗಿದ್ದಾರೆ.

ಮೀಸಲಾತಿ ನೀಡಿದಾಗಲೂ ಮಹಿಳೆಯರು ಎದುರಿಸಬೇಕಾಗುವ ಸಮಸ್ಯೆಗಳು

1. ಇಂದಿನ ಚುನಾವಣಾ ರಾಜಕಾರಣದಲ್ಲಿ ಹಣಗಳಿಸುವುದು ಒಂದು ದಂಧೆಯಾಗಿದೆ. ಇಂಥ ಸನ್ನಿವೇಶದಲ್ಲಿ ನಿಷ್ಠಾವಂತರಾಗಿರುವ ಮತ್ತು ಶ್ರಮಪಡುವ ಮಹಿಳೆಗೆ ರಾಜಕಾರಣದಲ್ಲಿ ಉಳಿಯುವುದು ತುಂಬಾ ಕಷ್ಟವಾಗುತ್ತದೆ. ಇದಲ್ಲದೆ ಮಹಿಳೆ ಪುರುಷರಿಗಿಂತ ಭಿನ್ನವಾದ ಕೆಲವು ಸಮಸ್ಯೆಗಳನ್ನು ಕೂಡ ಎದುರಿಸಬೇಕಾಗುತ್ತದೆ. ನಮ್ಮಲ್ಲಿ ಈ ಸಮಸ್ಯೆಗಳಿಂದ ಬಿಡಿಸಿಕೊಳ್ಳಬಲ್ಲಂಥ ಸಾಮಾಜಿಕ ವ್ಯವಸ್ಥೆಯಾಗಲೀ ಅಥವಾ ಅನುಕೂಲತೆಗಳಾಗಲೀ ಇನ್ನೂ ಸಾಧ್ಯವಾಗಿಲ್ಲ. ಉದಾಹರಣೆಗೆ : ಸರೋಜಾತಾಯ್ ಕಾಶೀಕರ್ ಅವರ ಬದುಕಿನ ಘಟನೆಗಳನ್ನು ಹೇಳುತ್ತೇನೆ. ಅದು ಹೆಚ್ಚಿನ ಹೆಂಗಸರ ವಿಚಾರದಲ್ಲೂ ಸತ್ಯ ಎಂದು ಭಾವಿಸಿದ್ದೇನೆ. ಆಕೆ ಶೇತ್ಕಾರಿ ಸಂಘಟನೆಯ ಮೂಲಕ 1991ರಲ್ಲಿ ರಾಜಕೀಯಕ್ಕೆ ಬಂದರು. 1995ರವರೆಗೆ ಮಹಾರಾಷ್ಟ್ರದ ಅಸೆಂಬ್ಲಿಯಲ್ಲಿ ಇದ್ದರು. ಆಕೆಯ ಕೆಲಸದ ಅನಿವಾರ್ಯತೆಯಿಂದಾಗಿ ಬಹಳ ದಿವಸಗಳ ಕಾಲ ಮನೆಯಿಂದ ದೂರವಾಗಿರಬೇಕಾಗುತ್ತಿತ್ತು. ಬಾಂಬೆಯಲ್ಲಿ ಒಬ್ಬಂಟಿಗಳಾಗಿ ವಾಸಿಸುವುದು ಸುರಕ್ಷಿತವೆನಿಸಿರಲಿಲ್ಲ. ಹಾಗಾಗಿ ಜೊತೆಗೆ ಕಿರಿಯ ವಯಸ್ಸಿನ ಮೈದುನ ಬಂದಿರಬೇಕಾಯಿತು. ಜೊತೆಗೆ ಮಧ್ಯವಯಸ್ಸಿನ ವಿವಾಹಿತ ಮಹಿಳೆಯಾದ ಆಕೆ ತನ್ನೊಡನೆ ಕೆಲಸ ಮಾಡುವ ಸಹೋದ್ಯೋಗಿಯೊಂದಿಗೆ ಮುಕ್ತವಾಗಿ ಮಾತುಕತೆಯಾಡುವುದೂ ಕೂಡ ಅಪಾರ್ಥಕ್ಕೆ ಎಡೆಮಾಡಿಕೊಡುವ ಸಂದರ್ಭಗಳೇ ಹೆಚ್ಚಿಗೆ ಇದ್ದವು. ಮತ್ತು ಆ ಮೂಲಕ ಚಾರಿತ್ರ್ಯವಧೆ ಮಾಡಬಹುದಾಗಿತ್ತು. . ಆಕೆಗೆ ತನ್ನದೇ ಸಂಘಟನೆಯಿಂದ ಚುನಾಯಿತರಾಗಿ ಬಂದಿದ್ದ ಮತ್ತು ಪತಿಯ ಆತ್ಮೀಯ ಗೆಳೆಯರು ಅಸೆಂಬ್ಲಿಯಲ್ಲಿ ಜೊತೆಗಿದ್ದು ಹೆಚ್ಚಿನ ಬಾರಿ ಆಕೆಯನ್ನು ಇಕ್ಕಟ್ಟಿನ ಪರಿಸ್ಥಿತಿಯಿಂದ ಪಾರು ಮಾಡುತ್ತಿದ್ದರು. ಹಾಗಿದ್ದಾಗಲೂ ಆಕೆಗೆ ಹಲವಷ್ಟು ಬಾರಿ ಒದ್ದಾಟಕ್ಕೆ ಸಿಕ್ಕಿಕೊಂಡು ಪೇಚಾಡುವಂತಾಗುತ್ತಿತ್ತು. ಮತ್ತು ಪ್ರತಿಯೊಂದು ಹೆಜ್ಜೆಯನ್ನೂ ತುಂಬಾ ಹುಷಾರಿನಿಂದ ಇಡಬೇಕಾಗುತ್ತಿತ್ತು. ಸರೋಜಾ ತಾಯಿಗೆ ಇಷ್ಟೆಲ್ಲಾ ಸಾಧ್ಯವಾದದ್ದು ಕೂಡ ಆಕೆಯ ಸಂಸಾರದ ಸದಸ್ಯರ ಬೆಂಬಲದಿಂದಲೇ. ಆಕೆಯ

ಪತಿಯ ಬೆಂಬಲ, ಸುಮಾರಾಗಿ ಹದಿಹರೆಯಕ್ಕೆ ಬಂದಿದ್ದ ಮಕ್ಕಳು, ಮನೆವಾಳ್ತೆಯನ್ನು ನೋಡಿಕೊಳ್ಳಲು ಮನೆಯಲ್ಲೇ ಇದ್ದ ನಾದಿನಿ, ಇವೆಲ್ಲಾ ಆಕೆಯ ಕೆಲಸಕ್ಕೆ ಸಹಕಾರಿಯಾದವು. ಆದರೆ ಇಷ್ಟಾಗಿಯೂ ಮಕ್ಕಳು ಆಕೆ ಬಹಳ ದಿನಗಳ ಕಾಲ ಮನೆಯಲ್ಲಿ ಇಲ್ಲದಿದ್ದಾಗ ಬೇಸರಿಸಿಕೊಳ್ಳುತ್ತಿದ್ದರು. ಒಂದು ವೇಳೆ ಮಕ್ಕಳು ಚಿಕ್ಕವರಾಗಿದ್ದರಂತೂ ಆಕೆ ಹಾಗೆ ಮನೆಯಿಂದ ದೂರವಿರುವುದಂತೂ ಕಷ್ಟವೇ ಆಗುತ್ತಿತ್ತು. ಇದೆಲ್ಲದರ ಜೊತೆಗೆ ಆಕೆಗೆ ಪಾರ್ಟಿಯಿಂದ ದೊರಕುತ್ತಿದ್ದ ಹಣದ ಜೊತೆಗೆ ಆಕೆಯ ಚುನಾವಣಾ ಪ್ರಚಾರಕ್ಕೆಂದು ಆಕೆಯ ಪತಿಯು ಸಾಕಷ್ಟು ಹಣವನ್ನು ಖರ್ಚುಮಾಡಬೇಕಾಗುತ್ತಿತ್ತು. ಆದರೆ ಅವಳಿಗೆ ಉಳಿದವರಂತೆ ಎಕ್ಸ್‌ಟ್ರಾ ಹಣ ಇಲ್ಲದಿದ್ದುದರಿಂದ ಖರ್ಚು ತೂಗಿಸುವುದು ನಿಜವಾಗಿಯೂ ಪ್ರಯಾಸದ ಕೆಲಸವಾಗಿತ್ತು. ಹಾಗಾಗಿ ರಾಜಕೀಯವಾಗಿ ಮಹಿಳೆ ಅರ್ಥಪೂರ್ಣವಾದ ಪಾತ್ರ ವಹಿಸಬೇಕಾದಲ್ಲಿ ಅವಳಿಗೆ ಬೆಂಬಲ ನೀಡುವ ಪತಿ ಮಾತ್ರ ಇದ್ದರೆ ಸಾಲದು ಅವಳನ್ನು ತೀವ್ರವಾಗಿ ಬೆಂಬಲಿಸುವಂಥ ಸಂಸಾರ ಮತ್ತು ಸ್ವಲ್ಪಮಟ್ಟಿನ ಶ್ರೀಮಂತಿಕೆಯೂ ಕೂಡ ಬೇಕಾಗುತ್ತದೆ. ಮಹಿಳೆ ಎದುರಿಸಬೇಕಾಗುವ ಸಮಸ್ಯೆಗಳೆಂದರೆ-

1) ಸಾಂಪ್ರದಾಯಿಕ ಪುರುಷಪ್ರಧಾನ ಮನೋಭಾವ.

2) ಹಳ್ಳಿಯ ಸಾಮಾಜಿಕ ಹೈರಾರ್ಕಿಯನ್ನು ಒಡೆಯಬೇಕಾಗುವುದು.

3) ಮನೆಯ ಕೆಲಸ ಶಿಶುಪಾಲನೆ ಅದಲ್ಲದೆ ಕೆಲವು ಆರ್ಥಿಕ ಸಮಸ್ಯೆಗಳು.

4) ಮಹಿಳೆಗೇ ವಿಶಿಷ್ಟವಾದ ಕೆಲವು ಸಾಮಾಜಿಕ ಸಮಸ್ಯೆಗಳು.

5) ಮಹಾರಾಷ್ಟ್ರದ ಶರದ್ ಜೋಷಿಯವರು ಮಹಿಳೆಯರು ಎದುರಿಸುವ ಮತ್ತೊಂದು ವಿಶಿಷ್ಟ ಸಮಸ್ಯೆಯನ್ನು ಪ್ರಸ್ತಾಪಿಸುತ್ತಾರೆ. ಚುನಾವಣೆಯ ನಂತರ ಅಂದರೆ ಚುನಾವಣೆಯಲ್ಲಿ ಸೋತ ನಂತರ ಮಹಿಳೆಯರನ್ನು ರಾಜಕೀಯದಲ್ಲಿ ಉಳಿಸಿಕೊಳ್ಳುವುದು ತೀರಾ ಕಷ್ಟ, ಏಕೆಂದರೆ ಚುನಾವಣೆಯಲ್ಲಿ ಸೋತ ನಂತರವೂ ಅವರು ರಾಜಕೀಯದಲ್ಲಿ ಉಳಿದುಕೊಂಡಲ್ಲಿ ಸಮಾಜ ಅವರನ್ನು ಕೀಳಾಗಿ ಕಾಣುತ್ತದೆ ಮತ್ತು ಅವರನ್ನು ರಾಜಕೀಯ ವ್ಯಸನಿಗಳೆಂದು ಲೇವಡಿಮಾಡುತ್ತದೆ.

6) ರಾಜಕೀಯದಲ್ಲಿ ಬಹು ಮುಖ್ಯವಾಗುವ ಅಂಶವೆಂದರೆ ಒಂದು ನೆಟ್‌ವರ್ಕ್ ಅನ್ನು ಬೆಳೆಸಿಕೊಳ್ಳುವುದು, ಅಂದರೆ ಸಂಪರ್ಕಗಳನ್ನು ಹೆಚ್ಚಿಸಿಕೊಳ್ಳುವುದು. ಇದನ್ನು ಪುರುಷನಷ್ಟು ಸಲೀಸಾಗಿ ಹೆಣ್ಣು ಮಾಡಲಾರಳು. ಏಕೆಂದರೆ ಶೀಲಕ್ಕೆ ಸಂಬಂಧಿಸಿದಂತೆ ಕೊಚ್ಚೆ ಎರಚುವ ಕೆಲಸವನ್ನು ಹೆಣ್ಣಿನ ಬಗ್ಗೆ ನಮ್ಮ ಸಮಾಜ ಬಹುಬೇಗನೆ ಮಾಡುತ್ತದೆ. ಮತ್ತು ನಮ್ಮ ರಾಜಕಾರಣದಲ್ಲಿ ಸಂಪರ್ಕವನ್ನು ಬೆಳೆಸಿಕೊಳ್ಳುವ ಕಾರ್ಯ ನಡೆಯುವುದು ಹೆಚ್ಚಿನ ಬಾರಿ ರಾತ್ರಿಯ ವೇಳೆಯಲ್ಲಿ ಅದೂ ಬಾಟಲ್ಲಗಳನ್ನು ಮುಂದಿಟ್ಟುಕೊಂಡೇ.

7) ಇಂದು ನಮ್ಮ ರಾಜಕಾರಣದಲ್ಲಿ ಸಾಂಘಿಕ ರಾಜಕಾರಣ ಮರೆಯಾಗಿ ಗೂಂಡಾ ರಾಜಕಾರಣ ಕಾಲಿಟ್ಟಿದೆ. ಇದರೊಳಗೆ ಕಾರ್ಯ ನಿರ್ವಹಿಸುವುದು ಮಹಿಳೆಗೆ ನಿಜವಾಗಿಯೂ ತೀರಾಕಷ್ಟ.

8) ನಮ್ಮ ದೇಶದಲ್ಲಿ ಬ್ಯೂರೋಕ್ರಸಿಯು ಎಲ್ಲೆಲ್ಲೂ ತಾಂಡವವಾಡುತ್ತಿದೆ. ಅಲ್ಲಿ ಒಂದೊಂದು ಪೇಪರ್ ಟೇಬಲ್ಲಿನಿಂದ ಟೇಬಲ್ಲಿಗೆ ಹೋಗಬೇಕಾದರೆ ನೂರುಬಾರಿ ಅಲೆಯಬೇಕಾಗುತ್ತದೆ. ಜೊತೆಗೆ ಈವರೆಗೆ ಹೆಚ್ಚಿನ ರಾಜಕಾರಣಿಗಳು ಈ ಸಂಪ್ರದಾಯವನ್ನು ವಿರೋಧಿಸುವ ಬದಲಾಗಿ ಅದಕ್ಕೆ ಪೋಷಿಸಿ ನೀರೆರೆದಿದ್ದಾರೆ. ಆದರೆ ಮಹಿಳೆಯೊಬ್ಬಳು ಹಾಗೆ ದಿನಗಟ್ಟಲೆ ಮನೆಯಿಂದ ದೂರವಿದ್ದು ಆಫೀಸಿನಲ್ಲಿ ಟೇಬಲ್ಲಿನಿಂದ ಟೇಬಲ್ಲಿಗೆ ಅಲೆಯಲಾರಳು.

ಮಹಿಳೆ ರಾಜಕೀಯವಾಗಿ ಸಶಕ್ತಳಾಗಬೇಕಾದರೆ ಆಗಬೇಕಾಗಿರುವ ಬದಲಾವಣೆಗಳು

ಇತ್ತೀಚೆಗಂತೂ ರಾಜಕೀಯದಲ್ಲಿ ಪಾಲ್ಗೊಳ್ಳುವ ಮಹಿಳೆ ಎಂದರೆ ಆಕೆ ಅವಿವಾಹಿತಳು. ಇಲ್ಲವೇ ವಿಧವೆ ಅಥವಾ ವಿಚ್ಛೇದಿತಳು ಎನ್ನುವಂತಾಗಿದೆ. ಹಾಗಾಗಿ ಮೀಸಲಾತಿ ಮಾತ್ರ ಇದ್ದರೆ ಸಾಲದು ಮೀಸಲಾತಿ ಅಥವಾ ರಾಜಕೀಯದಲ್ಲಿ ಮಹಿಳೆ ಅರ್ಥಪೂರ್ಣವಾಗಿ ಭಾಗವಹಿಸಬೇಕಾದರೆ ಇನ್ನೂ ಆಗಬೇಕಾದದ್ದು ಬಹಳಷ್ಟಿದೆ. ನಾವು ಅದರ ಕಡೆಗೂ ಗಮನ ಹರಿಸಬೇಕು. ಅವುಗಳಲ್ಲಿ ಮುಖ್ಯವಾದವು :

1. ಮಹಿಳೆಯನ್ನು ಬೆಂಬಲಿಸುವಂಥ ಮತ್ತು ರಾಜಕೀಯ ಹಿನ್ನೆಲೆ ಇರುವಂಥ ಕುಟುಂಬದ ಅವಶ್ಯಕತೆ ಇದೆ.

2. ಕುಟುಂಬದಲ್ಲೇ ಸಂಸಾರದ ಆಗುಹೋಗುಗಳನ್ನು ಗಮನಿಸಿ ಕೊಳ್ಳಬಹುದಾದಂಥ ಸಹೃದಯ ವ್ಯಕ್ತಿಗಳ ಅವಶ್ಯಕತೆ ಇದೆ.

3. ಆರ್ಥಿಕವಾಗಿ ಸ್ವಲ್ಪವಾದರೂ ಭದ್ರತೆ ಇರುವ ಕುಟುಂಬದ ಅನಿವಾರ್ಯತೆ ಇದೆ.

4. ಪ್ರಪಂಚದಾದ್ಯಂತ ಒಮ್ಮೆ ದೃಷ್ಟಿ ಹರಿಸಿ ನೋಡಿದರೆ ಯಾವ ಸಮಾಜದಲ್ಲಿ ರಾಜಕೀಯ ಸಂಸ್ಥೆಗಳು ಪ್ರಜಾಸತ್ತಾತ್ಮಕವಾದ ಮಾದರಿಯಲ್ಲಿ ಕಾರ್ಯ ನಿರ್ವಹಿಸುತ್ತಿದೆಯೋ, ಎಲ್ಲಿ ಹಿಂಸೆ,

ಅಪರಾಧ ಮತ್ತು ಭ್ರಷ್ಟಾಚಾರಗಳು ತೀರಾ ಕಡಿಮೆ ಇದೆಯೋ, ಎಲ್ಲಿ ಡಿಸಿಷನ್ ಮಾಡುವುದು ಕೆಲವೇ ಕೆಲವು ಮಂದಿಯ ಕೆಯಲ್ಲಿ ಕೇಂದ್ರಿಕೃತವಾಗಿಲ್ಲವೋ ಅಲ್ಲೆಲ್ಲಾ ಮಹಿಳೆ ರಾಜಕೀಯವಾಗಿ ಪ್ರಸ್ತುತವಾಗಿದ್ದಾಳೆ. ಹಾಗಾಗಿಯೇ ಸ್ಕಾಂಡಿನೇವಿಯದಲ್ಲಿ ಮಹಿಳೆಯ ಸಂಖ್ಯೆ ಹೆಚ್ಚಿದೆ. ಪುರುಷ ಪ್ರಧಾನತೆಯಿರುವ ಅಮೆರಿಕದಲ್ಲಿ ಅದು ಕಡಿಮೆಯಿದೆ.

5. ಸರಕಾರವು ಅತ್ಯುತ್ಕೃಷ್ಟವಾದ ಶಿಶುಪಾಲನಾ ವ್ಯವಸ್ಥೆಯನ್ನು ನೀಡಬೇಕು. ಸ್ವೀಡನ್ ಮತ್ತು ಸ್ಕಾಂಡಿನೇವಿಯದಲ್ಲಿ ಸಾರ್ವಜನಿಕ ಬದುಕಿನಲ್ಲಿ ಮಹಿಳೆಯ ಪಾತ್ರ ಹೆಚ್ಚಿರುವುದಕ್ಕೆ ಇದೂ ಒಂದು ಕಾರಣ. ಅಂದರೆ ರಾಜ್ಯವೇ ಇಲ್ಲಿ ಸಾಮಾಜಿಕ ಕಲ್ಯಾಣದ ಪಾತ್ರ ವಹಿಸುತ್ತದೆ.

6. ಎಲ್ಲದಕ್ಕಿಂತ ಹೆಚ್ಚಾಗಿ ಜರ್ಮನಿ, ಸ್ವೀಡನ್, ನೆದರ್‌ಲ್ಯಾಂಡ್ಸ್, ನ್ಯೂಜಿಲ್ಯಾಂಡ್ ಮುಂತಾದ ಕಡೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಇಲ್ಲ. ಆದರೂ ಕೂಡ ಅಲ್ಲಿ ರಾಜಕೀಯ ಪಕ್ಷಗಳು ಅತ್ಯಂತ ಪ್ರಜಾಸತ್ತಾತ್ಮಕ ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿವೆ. ಈ ಎಲ್ಲಾ ದೇಶಗಳಲ್ಲಿಯೂ ರಾಜಕೀಯ ಪಕ್ಷಗಳಲ್ಲಿ ಮಹಿಳೆಗೆ ಸುಮಾರು 50% ಸ್ಥಾನಗಳು ಇದ. ಜರ್ಮನಿ-50%, ನಾರ್ವೆ-40%, ನ್ಯೂಜಿಲ್ಯಾಂಡ್-50%, ನೆದರ್‌ಲ್ಯಾಂಡ್-45%. ಇಂಥ ಪ್ರವೃತ್ತಿ ಭಾರತದಲ್ಲೂ ಬೆಳೆಯಬೇಕು. ಏಕೆಂದರೆ ಭಾರತದಲ್ಲಿ ತುಂಬಾ ಪ್ರತಿಭಾವಂತರು ಎಂದೆನಿಸಿಕೊಂಡ ಮಹಿಳಾ ರಾಜಕಾರಣಿಗಳು ಕೂಡ ತಮ್ಮನ್ನು ಬದಿಗೊತ್ತಲಾಗಿದೆ ಎಂಬ ಭಾವನೆಯನ್ನು ವ್ಯಕ್ತಪಡಿಸಿಕೊಂಡಿದ್ದಾರೆ. ರಾಜಕೀಯ ಚಟುವಟಿಕೆಯ ಮೂಲವೇ ರಾಜಕೀಯ ಪಕ್ಷಗಳು ಎಂದಾಗಿರುವ ಸಂದರ್ಭದಲ್ಲಿ ಪಕ್ಷದೊಳಗೇ ಕೆಲಸವಾಗಬೇಕು. ನಮ್ಮ ದೇಶದಲ್ಲಿನ ರಾಜಕೀಯ ಪಕ್ಷಗಳಲ್ಲಿ ಮಹಿಳೆಯರಿಗೆ ನೀಡಿರುವ ಅವಕಾಶ ಹೀಗಿದೆ. (ಪಟ್ಟಿ-4).

ರಾಜಕಾರಣದಲ್ಲಿ ಮಹಿಳೆಗೆ ಮೀಸಲಾತಿ ಕೊಡಬೇಕೆಂಬುದು ತಾತ್ವಿಕವಾಗಿ ಸರಿ. ಆದರೆ ಮೀಸಲಾತಿ ನೀಡಿದ ಕೂಡಲೇ ಮಹಿಳೆ ರಾಜಕಾರಣದಲ್ಲಿ ಹೆಚ್ಚು ಸಮರ್ಥವಾಗಿ ಭಾಗವಹಿಸುವುದು ಸಾಧ್ಯವಾಗುತ್ತದೆ ಎಂಬುದು ಸತ್ಯದೂರವಾದ ಮಾತು. ರಾಜಕಾರಣದಲ್ಲಿ ಅವಳು ಅರ್ಥಪೂರ್ಣವಾದ ಪಾತ್ರವನ್ನು ನಿರ್ವಹಿಸಬೇಕಾದರೆ ನಮ್ಮ ವ್ಯವಸ್ಥೆಯಲ್ಲಿ ಅದಕ್ಕೆ ಪೂರಕವಾದ ಕೆಲವು ಬದಲಾವಣೆಗಳಾಗಬೇಕು. ನಮ್ಮ ರಾಜಕೀಯ ಪಕ್ಷಗಳ ಧೋರಣೆಯಲ್ಲಿ ಬದಲಾವಣೆಗಳಾಗಬೇಕು. ಮತ್ತು ಈಗ ಮಂಡಿಸಿರುವ ಮಸೂದೆಯಲ್ಲಿಯೂ ಕೆಲವು ಬದಲಾವಣೆಗಳಾಗಬೇಕು. ಆಗ ಮಾತ್ರ ಮೀಸಲಾತಿಯು ಅರ್ಥಪೂರ್ಣವಾಗುತ್ತದೆ

ಪಟ್ಟಿ-1 ರಾಜ್ಯ ವಿಧಾನಸಭೆಯಲ್ಲಿ ಸ್ತ್ರೀ ಮತ್ತು ಪುರುಷ ಪ್ರತಿನಿಧಿಗಳು

	ವರ್ಷ	ಮೊತ್ತ	ಸ್ತ್ರೀ	ವರ್ಷ	ಒಟ್ಟುಸ್ಥಾನ	ಸ್ತ್ರೀಯರು
ಆಂಧ್ರ	1957	252	11	1994	294	9
ಕರ್ನಾಟಕ	1957	179	18	1994	224	7
ಕೇರಳ	1957	127	6	1991	140	8
ಮಧ್ಯಪ್ರದೇಶ	1957	218	26	1993	320	12
ಪಂಜಾಬ್	1957	101	5	1992	117	6
ರಾಜಸ್ಥಾನ	1957	136	9	1994	200	9
ತ್ರಿಪುರ	1957	30	0	1992	60	2
ಉತ್ತರಪ್ರದೇಶ	1957	341	24	1993	425	12
ಪಶ್ಚಿಮಬಂಗಾಳ	1957	195	11	1991	294	18
ದೆಹಲಿ	1972	56	3	1993	70	3

Source: A status report on participation of women in panchayati Raj Institute of Social Sciences. New Delhi.

ಪಟ್ಟ-2 ಲೋಕಸಭೆಯಲ್ಲಿ (ಕೆಳಗಿನ ಮನೆ) ಮಹಿಳಾ ಪ್ರಾತಿನಿಧ್ಯ.			
ಲೋಕಸಭೆಯ ಅವಧಿ	ಒಟ್ಟು ಸ್ಥಾನಗಳು	ಮಹಿಳಾ ಸದಸ್ಯರ ಸಂಖ್ಯೆ	ಶೇಕಡಾವಾರು
1952-57	489	14	2.8
1957-62	494	18	3.6
1962-67	494	30	6.0
1967-71	520	31	6.0
1971-77	520	20	3.8
1977-80	542	19	3.5
1980-84	529	28	5.3
1984-89	542	42	7.7
1989-91	523	23	4.4
1991-96	536	39	7.2
1996	543	35	6.4

Source: Election Commission of India

ಪಟ್ಟ-3 ಆಯ್ದ ದೇಶಗಳ ಪಾರ್ಲಿಮೆಂಟಿನ ಕೆಳಗಿನ ಮನೆಯಲ್ಲಿ ಮಹಿಳಾ ಪ್ರಾತಿನಿಧ್ಯ 1994 (ಶೇಕಡಾವಾರು)			
ದೇಶಗಳು	ಸ್ಥಾನಗಳ ಸಂಖ್ಯೆ	ದೇಶಗಳು	ಸ್ಥಾನಗಳು
ಆಸ್ಟ್ರೇಲಿಯಾ	9	ಮೆಕ್ಸಿಕೊ	8
ಆಸ್ಟ್ರಿಯಾ	21	ನೆದರ್‌ಲ್ಯಾಂಡ್ಸ್	31
ಬಾಂಗ್ಲಾದೇಶ	10	ನ್ಯೂಜಿಲ್ಯಾಂಡ್	21
ಚಿಲಿ	9	ನಾರ್ವೆ	39
ಜೆಕೊರಿಪಬ್ಲಿಕ್	810	ಪೋಲ್ಯಾಂಡ್	13
ಡೆನ್ಮಾರ್ಕ್	33	ರಷ್ಯಾ	10
ಫಿನ್‌ಲ್ಯಾಂಡ್	39	ಸ್ವೀಡನ್	34
ಫ್ರಾನ್ಸ್	6	ಥಾಯ್‌ಲ್ಯಾಂಡ್	4
ಜರ್ಮನಿ	21	ಟರ್ಕಿ	2
ಭಾರತ	7	ಯುನೈಟೆಡ್ ಕಿಂಗ್‌ಡಮ್	9
ಜಪಾನ್	3	ಅಮೇರಿಕಾ(ಸೆನೆಟ್)	9
		ಪ್ರತಿನಿಧಿ ಮನೆ	·11

Source: The world's women 1995 : Trends and statistics united Nations, New York 1995, p.171-75

ಪಟ್ಟಿ-4 ಪ್ರಮುಖ ನಿರ್ಧಾರ ತೆಗೆದುಕೊಳ್ಳುವ ಸಮಿತಿಗಳಲ್ಲಿ ಮಹಿಳೆಯ ಪ್ರಾತಿನಿಧ್ಯ.				
ಪಕ್ಷಗಳು	ಸಮಿತಿಗಳು	ಮಹಿಳೆಯರ ಸಂಖ್ಯೆ	ಒಟ್ಟು ಸದಸ್ಯರು	ಶೇಕಡಾವಾರು ಮಹಿಳೆ
ಸಿಪಿಐ (ಎಂ)	ಪಕ್ಷದ ಕೇಂದ್ರ ಸಮಿತಿ	5	70	7
	ಪಾಲಿಟ್‌ಬ್ಯೂರೋ	0	15	0
ಸಿಪಿಐ	ಸೆಕ್ರೆಟೆರಿಯೆಟ್	0	9	0
	ರಾಷ್ಟ್ರೀಯ ಕಾಯಾಂಗ	3	31	10
	ರಾಷ್ಟ್ರೀಯ ಕೌನ್ಸಿಲ್	6-7	125	5
ಜನತಾದಳ	ರಾಜಕೀಯ ವ್ಯವಹಾರಗಳ ಸಮಿತಿ	0	15	0
	ಪಾರ್ಲಿಮೆಂಟ್ ಬೋರ್ಡ್	0	15	0
	ರಾಷ್ಟ್ರೀಯ ಕಾರ್ಯಾಂಗ	11	75	15
ಸಂಯುಕ್ತರಂಗ	ಸ್ಟೀರಿಂಗ್ ಸಮಿತಿ	0	15-17	0
ಭಾರತೀಯ ಜನತಾಪಾರ್ಟಿ	ಪಾರ್ಲಿಮೆಂಟ್ ಬೋರ್ಡ್	1	9	11
	ಚುನಾವಣಾ ಸಮಿತಿ	2	17	12
ಕಾಂಗ್ರೆಸ್	ವರ್ಕಿಂಗ್ ಸಮಿತಿ	2	19	11

ಅಂತರಿಕ್ಷದಲ್ಲಿ ಪ್ರಥಮ ಭಾರತೀಯ ಮಹಿಳೆ - ಕಲ್ಪನಾ ಚಾವಲಾ

ಅಮೆರಿಕದ ಪೌರತ್ವ ಪಡೆದ, ಭಾರತೀಯ ಹುಡುಗಿ ಕಲ್ಪನಾ ಚಾವಲಾ 1997, ನವೆಂಬರ್ 20, 'ಕೊಲಂಬಿಯಾ ಅಂತರಿಕ್ಷ ನೌಕೆ'ಯಲ್ಲಿ ಅಮೆರಿಕೆಯ 'ಲಿಂಡನ್ ಜಾನ್ಸನ್ ಸ್ಪೇಸ್ ಸೆಂಟರ್'ನಿಂದ ಭೂಮಿಯನ್ನು ಬಿಟ್ಟು ಅಂತರಿಕ್ಷಕ್ಕೆ ಹಾರಿದರು. ಆರು ಜನರ ಈ ತಂಡದಲ್ಲಿ ಕಲ್ಪನಾ ಒಬ್ಬರೇ ಮಹಿಳೆ. 35 ವರ್ಷದ ಕಲ್ಪನಾ, 1996ರ ಮೇ ತಿಂಗಳಿನಲ್ಲಿ 'ನಾಸಾ' (National Aeronautics and Space Administration - NASA) ದಿಂದ 'ಅಂತರಿಕ್ಷಯಾನಿ ತರಪೇತು' ಪಡೆದು ಪದವೀಧರರಾದರು. ಹದಿನಾಲ್ಕು ತಿಂಗಳು ಕಾಲ ಕಲ್ಪನಾ ತನ್ನ ಸಂಗಾತಿಗಳೊಡನೆ ಟೆಕ್ಸಾಸನ 'ಜಾನ್ಸನ್ ಸ್ಪೇಸ್ ಸೆಂಟರ್'ನಲ್ಲಿ ಕಠಿಣ ತರಪೇತು ಪಡೆದು, ಅಂತರಿಕ್ಷ ನೌಕೆಯ ಸಂಕೀರ್ಣ ಯಾಂತ್ರಿಕ ವ್ಯವಸ್ಥೆಯ ಬಹಳಷ್ಟು ಜ್ಞಾನವನ್ನು ಸಂಪಾದಿಸಿ, 'ಮಿಷನ್ ಸ್ಪೆಷಲಿಸ್ಟ್' ಆಗಿ ತರಪೇತು ಮುಗಿಸಿದರು.

ಹರಿಯಾಣದ ಸಣ್ಣ ಊರಿನ ಸಾಂಪ್ರದಾಯಸ್ಥ ಅವಿಭಾಜ್ಯ ಕುಟುಂಬದಲ್ಲಿ ಜನಿಸಿದ ಕಲ್ಪನಾರ ಶಾಲಾ ವಿದ್ಯಾಭ್ಯಾಸ ಕರ್ನಾಲನಲ್ಲಿ ನಡೆಯಿತು. ಬಾಲ್ಯದಲ್ಲಿಯೇ ಹಾರಾಟದ ಕನಸು. ಚಂಡೀಗರನಲ್ಲಿ 'ಏರೋನಾಟಿಕಲ್ ಇಂಜಿನಿಯರಿಂಗ್' ಪದವಿ ಪಡೆದು, 1982ರಲ್ಲಿ ಅಮೆರಿಕೆಗೆ ತೆರಳಿ, 'ಟೆಕ್ಸಾಸ್ ವಿಶ್ವವಿದ್ಯಾಲಯ'ದಿಂದ ಎಂ.ಎಸ್ಸಿ. ಪದವಿ ಪಡೆದರು. 1988ರಲ್ಲಿ, 'ಕೊಲರಾಡೋ ವಿಶ್ವವಿದ್ಯಾಲಯ'ದಿಂದ 'ಏರೋಸ್ಪೇಸ್ ಇಂಜಿನಿಯರಿಂಗ್'ನಲ್ಲಿ ಡಾಕ್ಟರೇಟ್ ಪದವಿ ಪಡೆದರು. ಇದೇ ಸಮಯದಲ್ಲಿ ಹಾರಾಟ ಕಲಿತರು. ಏಕ ಎಂಜಿನ್, ಬಹು ಎಂಜಿನ್ ವಿಮಾನಗಳ ಮತ್ತು ಸೀಪ್ಲೇನಗಳ ಚಾಲನೆಯ ಲೈಸೆನ್ಸ್ ಪಡೆದರು. ವಿಮಾನ ಕಸರತ್ತಿನಲ್ಲೂ (aerobatics) ತರಪೇತು ಪಡೆದರು. ಪ್ರತಿಷ್ಠಿತ 'ಅಂತರಿಕ್ಷ ಸಂಸ್ಥೆ'ಯಾದ 'ಸಿಗ್ಮಾ ಗಾಮಾ ತಾವ್'ದ ಸದಸ್ಯೆ ಈಕೆ.

ಅಂತರಿಕ್ಷದಲ್ಲಿ ಪ್ರಥಮ ಮಹಿಳೆ - ವ್ಯಾಲೆಂಟಿನಾ ತೆರೆಸ್ಕೋವಾ

ಅಂತರಿಕ್ಷಕ್ಕೆ ಹಾರಿದ ಮೊಟ್ಟಮೊದಲ ಮಹಿಳೆ, 1937ರಲ್ಲಿ ಹುಟ್ಟಿದ ರಷಿಯಾದ ವ್ಯಾಲೆಂಟಿನಾ ತೆರೆಸ್ಕೋವಾ. ತನ್ನ ಶಾಲೆಯ ವಿದ್ಯಾಭ್ಯಾಸ ಮುಗಿಸಿದ ವ್ಯಾಲೆಂಟಿನಾ ಒಂದು ಟೈಯರ್ ಕಾರ್ಖಾನೆಯಲ್ಲಿ, ನಂತರ ಬಟ್ಟೆ ಮಿಲ್ಲಿನಲ್ಲಿ ಕೆಲಸ ಮಾಡಿದ್ದಳು. ವಿಮಾನ ಚಾಲನೆಯ ತರಪೇತು ಇಲ್ಲದಿದ್ದರೂ, ಈಕೆ ಬಹಳ ಒಳ್ಳೆಯ ಹವ್ಯಾಸಿ 'ಪ್ಯಾರಾಷೂಟಿಸ್ಟ್'. 1961ರಲ್ಲಿ ತೆರೆಸ್ಕೋವಾ ಅಂತರಿಕ್ಷಯಾನಕ್ಕೆ ಸ್ವಯಂ ಇಚ್ಛೆಯಿಂದ ಮುಂದಾದಾಗ, ಇದೇ ಕಾರಣಕ್ಕೆ ಉಡಾಯಿಸಲ್ಪಟ್ಟ ವಸ್ಟೋಕ್ 6 ಅಂತರಿಕ್ಷ ನೌಕೆಯಲ್ಲಿ ತೆರೆಸ್ಕೋವಾ ಹಾರಿದಳು. ಈ ನೌಕೆ 71 ಗಂಟೆಗಳಲ್ಲಿ 48 ಬಾರಿ ಭೂಮಿಯನ್ನು ಸುತ್ತಿ ಬಂದು, ಜೂನ್ 19ರಂದು ಭೂಮಿಯನ್ನು ಸುರಕ್ಷಿತವಾಗಿ ತಲುಪಿತು. ವ್ಯಾಲೆಂಟೀನಾ ಅಂತರಿಕ್ಷದಲ್ಲಿದ್ದ ಹೊತ್ತು, ದೂರದರ್ಶನ ಪ್ರಸಾರವನ್ನು ಮಾಡಿದಳು, ಜೊತೆಗೆ ಮತ್ತೊಂದು ಅಂತರಿಕ್ಷ ನೌಕೆ ವಸ್ಟೋಕ್ 5ರೊಡನೆ ಸತತ ರೇಡಿಯೋ ಸಂಪರ್ಕವಿಟ್ಟುಕೊಂಡಿದ್ದಳು. ಅದೇ ವರ್ಷ ವ್ಯಾಲೆಂಟೀನಾ ಅಂತರಿಕ್ಷಯಾನಿ ಆಂಡ್ರಿಯನ್ ಜಿ. ನಿಕೋಲಾಯೆವರೊಡನೆ ವಿವಾಹವಾದಳು.

ಚುನಾವಣೆ ಮತ್ತು ಮಹಿಳೆ

ಬೆಂಗಳೂರಿನಲ್ಲಿ ಮಹಿಳಾಸಂಘಟನೆಗಳಾದ ಜನವಾದಿ ಮಹಿಳಾ ಸಂಘಟನೆ, ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಸಂಯುಕ್ತ ಮಹಿಳಾ ವೇದಿಕೆ, ದುಡಿಯುವ ಮಹಿಳೆಯರ ಸಮನ್ವಯ ಸಮಿತಿ, ಮಹಿಳಾ ದಕ್ಷತಾ ಸಮಿತಿ ಮುಂತಾದ ಇನ್ನೂ ಹಲವಾರು ಸಂಘಟನೆಗಳು ಚುನಾವಣೆಯಲ್ಲಿ ಮಹಿಳೆಯರ ಪಾತ್ರದ ಬಗ್ಗೆ ವ್ಯಾಪಕ ಪ್ರಚಾರದ ಕಾರ್ಯಕ್ರಮ ಕೈಗೊಂಡರು. ರಾಜಕೀಯ ಪಕ್ಷಗಳ ಧುರೀಣರನ್ನು ಆಹ್ವಾನಿಸಿ ಮಹಿಳಾಪರ ಕಾಳಜಿಗಳಿಗೆ ರಾಜಕೀಯ ಪಕ್ಷಗಳ ನಿಲುವನ್ನು ಕುರಿತಂತೆ ಒಂದು ಮುಖಾಮುಖಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಪಕ್ಷದ ಹಸನಬ್ಬ, ಭಾರತೀಯ ಜನತಾಪಕ್ಷದ ಪ್ರಮಿಳಾ ನೇಸರ್ಗಿ, ಜನತಾಪಕ್ಷದ ಪ್ರಭಾವತಿ, ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಜಿ.ಎನ್. ನಾಗರಾಜ್, ಭಾರತೀಯ ಕಮ್ಯೂನಿಸ್ಟ್ ಪಕ್ಷದ ಜಯತೀರ್ಥ, ಲೋಕಶಕ್ತಿಯ ಪ್ರಮೋದ್‌ಹೆಗ್ಡೆ, ಕರ್ನಾಟಕ ವಿಕಾಸಪಕ್ಷದ ನಾರಾಯಣಸ್ವಾಮಿ ಭಾಗವಹಿಸಿದ್ದರು. ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯ ವರಲಕ್ಷ್ಮಿ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಆರಂಭದಲ್ಲಿ ಪತ್ರಕರ್ತೆ ಪಾರ್ವತಿ ಮನನ್ Womens empowerment ನ ವಿವಿಧ ಆಯಾಮಗಳನ್ನು, ಡಾ|| ವಿಜಯಾ 'ಮಹಿಳೆ ಮತ್ತು ಕೋಮುವಾದ'ವನ್ನು ಹಾಗೂ ಭ್ರಷ್ಟಾಚಾರದ ವಿವಿಧ ಮುಖಗಳನ್ನು ಕುರಿತು ಶ್ರೀಮತಿ ಶರಣ್ಯ ಹೆಗ್ಗಡೆಯವರು ಭಾಷಣ ಮಾಡಿ ಮುಖಾಮುಖಿಯ ಚರ್ಚೆಗೆ ಭೂಮಿಕೆ ಹಾಕಿದರು. ತಮ್ಮ ಪಕ್ಷಗಳ ಪ್ರಣಾಳಿಕೆಯನ್ನು ಸಭಿಕರ ಮುಂದಿಟ್ಟ ಭಾಷಣಕಾರರಿಗೆ ಸಭಿಕರಿಂದ ಪ್ರಶ್ನೆಗಳ ಸುರಿಮಳೆಯಾಯಿತು. ತಮ್ಮ ಪಕ್ಷದಲ್ಲಿ ಹಲವಾರು ಸಮರ್ಥ ಮಹಿಳೆಯರಿದ್ದಾರೆಂದು, ತಮ್ಮ ಪಕ್ಷ ಮಹಿಳಾಪಕ್ಷವೆಂದು ಘೋಷಿಸಿಕೊಂಡ ಕಾಂಗ್ರೆಸ್‌ನ ಹಸನಬ್ಬರವರಿಗೆ ಕಾಂಗ್ರೆಸ್‌ಪಕ್ಷ ತೋರಿಸಿದ ಸ್ತ್ರೀವಿರೋಧಿ ನಿಲುವುಗಳನ್ನು ಪ್ರಶ್ನಿಸಲಾಯಿತು. ಚಿಕ್ಕಮಗಳೂರಿನಲ್ಲಿ ತಾರಾದೇವಿಗೆ ಟಿಕೆಟ್ ನೀಡದೆ ಮೊಯಿಲಿಗೆ ಟಿಕೇಟ್ ನೀಡಿದ್ದೇಕೆ ಎಂಬ ಪ್ರಶ್ನೆಗೆ ಅದು ಪಕ್ಷದ ನಿಲುವೆಂಬ ಉತ್ತರ ಬಂತು. ಜನತಾಪಕ್ಷದ ಪ್ರತಿನಿಧಿ ಪ್ರಭಾವತಿಯವರಿಗೆ ಸಭಿಕರಿಂದ ಬಂದ ಪ್ರಶ್ನೆ : 'ಜನತಾಪಕ್ಷದ ಧುರೀಣರಾಗಿರುವ ಮುಖ್ಯಮಂತ್ರಿಗಳ ಲಜ್ಜೆಗೆಟ್ಟ ಮಾತು ಮತ್ತು ವರ್ತನೆಯನ್ನು ಹೇಗೆ ಸಮರ್ಥಿಸಿಕೊಳ್ಳುತ್ತೀರಿ' ಎಂಬ ಪ್ರಶ್ನೆಗೆ ಪಕ್ಷದಲ್ಲಿ ಆಂತರಿಕವಾಗಿ ಮಹಿಳೆಯರು ಮುಖ್ಯಮಂತ್ರಿಗಳ ವರ್ತನೆಯನ್ನು ಖಂಡಿಸುತ್ತೇವೆಂಬ ಉತ್ತರಬಂತು. ಹಿಂದುತ್ವ'ವೆಂದರೆ 'ಸರ್ವರಿಗೂ ನ್ಯಾಯ' ಎಂಬ ಹೊಸ ವ್ಯಾಖ್ಯಾನ ಮಾಡಿದ ಭಾರತೀಯ ಜನತಾಪಕ್ಷದ ಪ್ರಮಿಳಾ ನೇಸರ್ಗಿಯವರು ಸಭಿಕರು ಕೇಳಿದ ಸ್ತ್ರೀ ಕೇಂದ್ರಿತ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಲೇ ಇಲ್ಲ, ರಾಮದೇವಾಲಯ ಕಟ್ಟುವ ಔಚಿತ್ಯವನ್ನಷ್ಟೇ ಸಮರ್ಥಿಸಿಕೊಂಡರು. ಕೇರಳದಲ್ಲಿ ಸುಶೀಲಾಗೋಪಾಲನ್‌ರವರನ್ನು ಅವಕಾಶವಿದ್ದಾಗಲೂ ಏಕೆ ಮುಖ್ಯಮಂತ್ರಿ ಮಾಡಲಿಲ್ಲ, ಎಂಬ ಸಭಿಕರ ಪ್ರಶ್ನೆಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಜಿ.ಎನ್. ನಾಗರಾಜ್‌ರವರು 'ಸುಶೀಲಾ ಗೋಪಾಲನ್‌ರವರು ಮುಖ್ಯಮಂತ್ರಿಯಾಗಬೇಕೆಂಬ ಸುದ್ದಿಯೇ ಇರಲಿಲ್ಲ. ಪತ್ರಿಕೆಗಳು, ಮಾಧ್ಯಮದವರು ಇದನ್ನು ಸುದ್ದಿಮಾಡಿದರಷ್ಟೇ' ಎಂದು ಹಾರಿಕೆಯ ಉತ್ತರ ನೀಡಿದರು.

ಈ ಸಭೆಯಲ್ಲಿ ವ್ಯಕ್ತವಾದ ಮಹಿಳೆಯರನ್ನು ಕುರಿತ ಚಿಂತನೆಗಳು ರಾಜಕೀಯದಲ್ಲಿ ಮಹಿಳೆ ಎದುರಿಸಬೇಕಾದ ಸಂಕಷ್ಟದ ಚಿತ್ರವನ್ನು ನೀಡಿದವು. 'ಪುರುಷ ಸ್ತ್ರೀದ್ವೇಷಿಯಲ್ಲ, ಹೆಣ್ಣಿಗೆ ಹೆಣ್ಣೇ ಶತ್ರು. ಗಂಡ ಭ್ರಷ್ಟನಾಗಲೂ ಕೂಡ ಹೆಂಡತಿಯೇ ಕಾರಣ' ಎಂದು ಕಾಂಗ್ರೆಸ್‌ನ ಹಸನಬ್ಬ ಹೇಳಿದರು. 'ಗಂಡಸು ಗೆದ್ದರೆ ಪ್ರತಿನಿಧಿ, ಹೆಂಗಸು ಗೆದ್ದರೆ ತಾಯಿ. ವಾಸ್ತವವಾಗಿ ಆಡಳಿತಕ್ಕೆ ಬಂದ ಮಹಿಳೆಯರು ತುಂಬ ಕಷ್ಟ ಪಡುತ್ತಿದ್ದಾರೆ. ಆದ್ದರಿಂದ ಸುಮ್ಮನೆ ಮೀಸಲಾತಿ ಕೊಟ್ಟರೆ ಮಹಿಳೆಯರ ಸಮಸ್ಯೆ ಪರಿಹಾರವಾಗುವುದಿಲ್ಲ' ಎಂಬುದು ಲೋಕಶಕ್ತಿಯ ಪ್ರಮೋದ ಹೆಗ್ಗಡೆಯ ಉವಾಚ.

ಒಟ್ಟಿನಲ್ಲಿ ಈ ಸಭೆಯಲ್ಲಿ ಭಾಗವಹಿಸಿದ್ದ ರಾಜಕೀಯ ಧುರೀಣರು ತಮ್ಮ ಮಹಿಳಾಪರತೆ ಮತ್ತು ಮಹಿಳಾನಿಷ್ಠೆಯನ್ನು ಮೆರೆಯುವುದಕ್ಕಿಂತ ತಮ್ಮ ಪಕ್ಷನಿಷ್ಠೆ, ವ್ಯಕ್ತಿ ನಿಷ್ಠೆ ಹಾಗೂ ಸ್ವಾಭಿಮಾನದ ವಿಚಿತ್ರ ಸಿದ್ಧಾಂತಗಳನ್ನು ಮೆರೆದರು.

ಬೆಂಗಳೂರಿನ ಈ ಮಹಿಳಾ ಸಂಘಟನೆಗಳೆಲ್ಲಾ ಒಟ್ಟಾಗಿ ಮಹಿಳಾ ಮತದಾರರಿಗೆ ಈ ರೀತಿ ಮನವಿ ಮಾಡಿಕೊಂಡಿವೆ.

ಈಗ ನಮ್ಮ ಕರ್ತವ್ಯವೇನು ?

ಜನಸಂಖ್ಯೆಯ ಅರ್ಧ ಭಾಗದಷ್ಟಿರುವ ಮಹಿಳೆಯರು ತಮ್ಮ ಜವಾಬ್ದಾರಿಯನ್ನು ಇಂದು ಅರ್ಥ ಮಾಡಿಕೊಳ್ಳಬೇಕು. ಹೋರಾಟದ ಮೂಲಕ ಗಳಿಸಿದ ಅಮೂಲ್ಯ ಮತದಾನದ ಹಕ್ಕನ್ನು ಚಲಾಯಿಸಬೇಕು. ಪ್ರಜಾತಂತ್ರದ ಕರ್ತವ್ಯಕ್ಕೆ ಬದ್ಧರಾಗಬೇಕು.

ರಾಜಕೀಯ ಪಕ್ಷಗಳಿಗೆ ನೆನಪಿಸಬೇಕಾದ ಅಂಶಗಳು :

ಹಿಂದಿನ ಚುನಾವಣೆಯ ಸಂದರ್ಭದಲ್ಲಿ ಎಲ್ಲ ರಾಜಕೀಯ ಪಕ್ಷಗಳೂ 'ಮಹಿಳಾ ಮೀಸಲಾತಿ ಮಸೂದೆ'ಯನ್ನು ಜಾರಿಗೆ ತರುವುದಾಗಿ ಭರವಸೆ ನೀಡಿದ್ದವು. ಆದರೆ ಅದು ಚರ್ಚೆಗೆ ಬಂದಾಗ

ವಿವಿಧ ಪಕ್ಷಗಳ ಸಂಸದರು ನಡೆದುಕೊಂಡ ರೀತಿಯನ್ನು ಮಹಿಳೆಯರು ಮರೆತಿಲ್ಲ. ಇತರ ಹಿಂದುಳಿದ ವರ್ಗಗಳಿಗೆ ಪ್ರಾತಿನಿಧ್ಯ ಎಂಬ ನೆಪದಲ್ಲಿ ಈ ಮಸೂದೆಗೆ ಅಡ್ಡಿ ಬಂದ ವ್ಯಕ್ತಿಗಳೇ ದೇಶದ ಅತ್ಯಂತ ಬಡತನದಲ್ಲಿರುವ ಹಿಂದುಳಿದ ವರ್ಗಗಳ 30 ಮಿಲಿಯಕ್ಕೂ ಹೆಚ್ಚು ಮಹಿಳೆಯರ ಬದುಕಿಗೆ ಆಧಾರವಾಗಬಲ್ಲ ಕೃಷಿಕೂಲಿಕಾರರ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲು ಆಸ್ಪದ ನೀಡಲಿಲ್ಲ. ಇದರ ಅರ್ಥ ಏನೆಂದು ರಾಜಕೀಯ ಪಕ್ಷಗಳಿಗೆ ನಾವಿಂದು ಪ್ರಶ್ನಿಸಬೇಕು.

ದೇಶದ ಸ್ವಾತಂತ್ರ್ಯ, ಸಾರ್ವಭೌಮತೆ, ಸ್ವಾವಲಂಬನೆಯನ್ನು ರಕ್ಷಿಸುವ, ಜಗತ್ತಿಗೇ ಮಾದರಿಯಾದ ಜಾತ್ಯಾತೀತ ಸಂವಿಧಾನವನ್ನು ಗೌರವಿಸುವ, ಕೋಮು ಭಾವನೆಗಳನ್ನು ಕೆರಳಿಸದ ಪಕ್ಷಗಳನ್ನು ಕೇಂದ್ರದಲ್ಲಿ ಅಧಿಕಾರಕ್ಕೆ ತರಲು ಶ್ರಮಿಸಬೇಕು.

ನಮ್ಮ ಆಯ್ಕೆ ಯಾರು ?

1. ಮಹಿಳಾ ಮೀಸಲಾತಿ ಮತ್ತು ಕೃಷಿಕೂಲಿಕಾರರ ಮಸೂದೆಯ ಜಾರಿಗೆ ಬದ್ಧರಾಗುವ, ದೇಶದ ಮಹಿಳೆಯರ ಸಮಸ್ಯೆಗಳಿಗೆ ಪ್ರಜ್ಞಾಪೂರ್ವಕವಾಗಿ ಪ್ರಾಮಾಣಿಕವಾಗಿ ಸ್ಪಂದಿಸುವ ಪಕ್ಷಗಳಾಗಬೇಕು.
2. ಮಹಿಳೆಯರ ಮೇಲಿನ ದೌರ್ಜನ್ಯದ ಆರೋಪಗಳನ್ನೊಳಗೊಂಡಂತೆ ಕ್ರಿಮಿನಲ್ ಅಪರಾಧಗಳ ಪಟ್ಟಿಯಲ್ಲಿಲ್ಲದ ಅರ್ಹವ್ಯಕ್ತಿ ನಮ್ಮ ಆಯ್ಕೆಯಾಗಬೇಕು.
3. ಜಾತಿ ಧರ್ಮಗಳ ಹೆಸರಿನಲ್ಲಿ ಜನರಲ್ಲಿ ಕೋಮುಭಾವನೆ ಹುಟ್ಟುಹಾಕುವ ಪಕ್ಷಗಳನ್ನು ಸೋಲಿಸಿ, ಪರಸ್ಪರ ಸಾಮರಸ್ಯದ ಭಾವನೆ ಬೆಳೆಸುವ ಪಕ್ಷಗಳು ನಮ್ಮ ಆಯ್ಕೆಯಾಗಬೇಕು.
4. ಬಹಿರಂಗದಲ್ಲಿ ಮಹಿಳಾ ಪರ ಮೊಸಳೆ ಕಣ್ಣೀರು ಸುರಿಸುವ ವಾಸ್ತವದಲ್ಲಿ ಮಹಿಳಾ ವಿರೋಧಿ ಧೋರಣೆಗಳನ್ನು ಅನುಸರಿಸುವ ಪಕ್ಷಗಳನ್ನು ಸೋಲಿಸಿ ಮಹಿಳಾ ಸಮಾನತೆಯನ್ನು ಗೌರವಿಸುವ ಪಕ್ಷಗಳನ್ನು ಬೆಂಬಲಿಸಲು ರಾಜ್ಯದ ಮಹಿಳಾ ಸಂಘಟನೆಗಳು ಮಹಿಳಾ ಮತದಾರರಲ್ಲಿ ಮನವಿ ಮಾಡುತ್ತವೆ.

"ಬನ್ನಿ ಮತ ಚಲಾಯಿಸೋಣ, ಸರಿಯಾದ ಆಯ್ಕೆ ಮಾಡೋಣ,
ಜಾತ್ಯಾತೀತ, ಸ್ವಾವಲಂಬೀ ಭಾರತದ ರಕ್ಷಣೆಗೆ ಬದ್ಧರಾಗೋಣ.
ಸಮಾನತೆಯ ಮತ್ತು ಸಂಪೂರ್ಣ ಅವಕಾಶಗಳ ಸಮಾಜದತ್ತ ಮುನ್ನಡೆಯೋಣ."

ವಾಸ್ತವತೆಯ ಸಾಹಿತ್ಯಕ ರೂಪವು ತನ್ನಿಂದತಾನೆ ಸಹಜವಾಗಿ ವಸ್ತುಲೋಕದ ನಿಜದೊಂದಿಗೆ ಹೊಂದಿಕೊಂಡೀತೆಂದು ಊಹಿಸುವುದು ತಪ್ಪಾದೀತು. ಹೀಗಾಗಿದ್ದಲ್ಲಿ ಸಾಮಾನ್ಯ ವೈಜ್ಞಾನಿಕ ವಿಧಾನವನ್ನು ಅಳವಡಿಸುವುದಕ್ಕೂ ಮೊದಲು ನಿಜವಾದ ಮೌಲ್ಯವುಳ್ಳ ಸಾಹಿತ್ಯವೇ ಇರುತ್ತಿದ್ದಿಲ್ಲ. ಆದರೆ, ಪ್ರಾಚೀನ ಕಾಲದಲ್ಲಿ ಸತ್ವವುಳ್ಳ ಮಹತ್ವಪೂರ್ಣವಾದ ಸಾಹಿತ್ಯ ರಚನೆಯಾಯಿತು ಎನ್ನುವುದು ನಮಗೆ ಗೊತ್ತು. ಈ ರೀತಿ ವೈರುಧ್ಯದ ತೋರಿಕೆಗೆ ಉತ್ತರವೆಂದರೆ ವಾಸ್ತವವನ್ನು ಕುರಿತ ಗ್ರಹಿಕೆ ಎಷ್ಟೇ ಪರಿಮಿತವಿರಲಿ, ಅದು ಸಂಸ್ಕೃತಿಗೆ ತಳಹದಿಯನ್ನು ಕಲ್ಪಿಸುತ್ತದೆ ಮತ್ತು ಆ ಸಂಸ್ಕೃತಿ ತನ್ನಲ್ಲಿ ತಾನೇ ಕಲಾವಿದನೊಬ್ಬ ಕಲಾಸೃಷ್ಟಿಯಲ್ಲಿ ಹಿಡಿಯಬಹುದಾದ ವಾಸ್ತವಾಂಶವೂ ಆಗುತ್ತದೆ ಎಂಬುದೇ ಆಗಿದೆ.

- ಹೋವರ್ಡ್ ಫಾಸ್ಟ್

(Literature and Reality ಯಿಂದ)

ರೂಪನ್‌ಬಜಾಜ್ : ಹತ್ತು ವರ್ಷಗಳ ಅಂಚಿಗೆ ದೊರೆತ ನ್ಯಾಯ

- ನೇಮಿಚಂದ್ರ

ದುಡಿಮೆಯ ಕ್ಷೇತ್ರದಲ್ಲಿ ಹೆಣ್ಣು ಎದುರಿಸಬೇಕಾಗಿರುವ ಲೈಂಗಿಕ ಹಿಂಸೆಗಳನ್ನು ಕುರಿತು ಸುಪ್ರೀಂಕೋರ್ಟು ಆಜ್ಞೆ ನೀಡಿರುವ ಹಿನ್ನೆಲೆಯಲ್ಲಿ ಲೈಂಗಿಕ ಹಿಂಸೆ ನಿರ್ವಚನಗಳಿಗೆ (ಟೀಕೆ, ಪ್ರತಿಕ್ರಿಯೆ, ಮೂದಲಿಕೆ, ದೈಹಿಕ ಹಿಂಸೆ) ಹೊಸ ಆಯಾಮಗಳು ಬಂದಿವೆ. ಈ ಹಿನ್ನೆಲೆಯಲ್ಲಿ ರೂಪನ್‌ಬಜಾಜ್ ಪ್ರಕರಣಕ್ಕೆ ಸುಪ್ರೀಂಕೋರ್ಟು ನೀಡಿರುವ ತೀರ್ಪು ಸ್ವಾಗತಾರ್ಹವೆನಿಸಿ ದುಡಿಯುವ ಮಹಿಳೆಗೆ ಹೊಸ ಭರವಸೆಯನ್ನು ತುಂಬಲಿದೆ.

ಪಂಜಾಬಿನ 'ಹೀರೋ' ಎನಿಸಿ ಭಯೋತ್ಪಾದಕರನ್ನು ಸದೆಬಡಿದ 'ಸೂಪರ್‌ಕಾಪ್' ಗಿಲ್ ನಡೆಸುವ ಲೈಂಗಿಕ ಭಯೋತ್ಪಾದನೆಯ ಹುಟ್ಟಡಗಿಸಲು ಹೊರಟ ರೂಪನ್ ಬಜಾಜ್ ಅವರಿಗೆ, ಕಡೆಗೂ ಹತ್ತು ವರ್ಷಗಳ ಹೋರಾಟದಂಚಿಗೆ ನ್ಯಾಯ ದೊರೆತಿದೆ. ಸುಪ್ರೀಂ ಕೋರ್ಟ್ ಗಿಲ್ ಅವರಿಗೆ ಸಾರ್ವಜನಿಕ ಸ್ಥಳಗಳಲ್ಲಿ ಕುಡಿಯಕೂಡದೆಂಥು ನಿಷೇಧ ವಿಧಿಸಿದೆ. ರೂಪನ್ ಅವರಿಗೆ ಪರಿಹಾರವಾಗಿ ಎರಡು ಲಕ್ಷ ರೂಪಾಯಿಗಳನ್ನೂ, ರೂಪನ್ ಅವರ ಲಿಟಿಗೇಷನ್ ಖರ್ಚು 50,000 ರೂಪಾಯಿಗಳನ್ನು ನೀಡುವಂತೆ ಆದೇಶಿಸಿದೆ. ತಮ್ಮ ಪಿ.ಎಫ್. ಹಣವನ್ನೂ ತೊಡಗಿಸಿ, ಹತ್ತು ವರ್ಷಗಳ ಕಾಲ ಮಾನಸಿಕ ಚಿತ್ರಹಿಂಸೆ, ಆರ್ಥಿಕ ಮುಗ್ಗಟ್ಟು, ಸಾವಿನ ಬೆದರಿಕೆ ಎಲ್ಲವನ್ನೂ ಎದುರಿಸಿ ಹೋರಾಡಿ ಗಳಿಸಿರುವ ರೂಪನ್ ಅವರ ಈ ಜಯ, ವಿಶಿಷ್ಟವಾದದ್ದು. ಮೊಟ್ಟಮೊದಲಿಗೆ ಮಹಿಳೆಯರ ಮೇಲಿನ ಲೈಂಗಿಕ ಕಿರುಕುಳವನ್ನು ಗುರುತಿಸಿ, ಅರ್ಥಮಾಡಿಕೊಂಡು ಕೋರ್ಟು ನೀಡಿರುವ ತೀರ್ಪು ಇದಾಗಿದೆ. ರೂಪನ್ ಬಜಾಜ್ ಅವರ ಈ ಕೇಸು, ಉದ್ಯೋಗಸ್ಥ ಮಹಿಳೆ ಲೈಂಗಿಕ ಕಿರುಕುಳದ ವಿರುದ್ಧ ಎತ್ತಿದ ಗಟ್ಟಿದನಿಯಾಗಿ ಎಚ್ಚರಿಕೆಯ ಗಂಟೆ ಬಾರಿಸಿದೆ.

1988, ಔತಣಕೂಟವೊಂದರಲ್ಲಿ ಪಂಜಾಬಿನ ಐ.ಪಿ.ಎಸ್. ಅಧಿಕಾರಿ ಕೆ.ಪಿ.ಎಸ್. ಗಿಲ್, ಹಿರಿಯ ಐ.ಎ.ಎಸ್. ಅಧಿಕಾರಿ ರೂಪನ್ ಬಜಾಜ್ ಅವರೊಡನೆ ಅಸಭ್ಯವಾಗಿ ಉದ್ಧಟತನದಿಂದ ವರ್ತಿಸಿದರು. ಒಂದಷ್ಟು ಪೆಗ್ ಇಳಿಸಿದ್ದ ಗಿಲ್ ರೂಪನ್ ಅವರ ಪತಿ ಎದುರಿಗೇ ಇದ್ದಾರೂ ಯಾವ ಭೀತಿ ಇಲ್ಲದೆ, ಆಕೆಯ ನಿತಂಬದ ಮೇಲೆ ಎತ್ತಿ ಬಾರಿಸಿದರು. ಅಲ್ಲಿದ್ದ ಆಹ್ವಾನಿತ ಅಧಿಕಾರಿಗಳು, ಅವರ ಪತ್ನಿಯರು, ಅತಿಥಿಗಳು, ಅನೇಕ ಪತ್ರಿಕೋದ್ಯಮಿಗಳು ಈ ಘಟನೆಗೆ ಸಾಕ್ಷಿ ಇದ್ದರು.

ರೂಪನ್ ತಟ್ಟನೆ ಗಿಲ್ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಕೇಳಿಕೊಂಡರು. ಅದಕ್ಕೆ ಪ್ರತಿಕ್ರಿಯೆ ಇರಲಿಲ್ಲ. ಗಿಲ್ ಅವರದು ಇದು ಒಂದು ಬಾರಿಯ ಆಕಸ್ಮಿಕ ಅಪರಾಧವಾಗಿರಲಿಲ್ಲ. ಪ್ರತಿಬಾರಿ ಕುಡಿದು ಹೆಂಗಸರೊಡನೆ ಅಸಭ್ಯವಾಗಿ ವರ್ತಿಸುವುದು ಆತನ ರೂಢಿಯಾಗಿತ್ತು. ಪ್ರಶ್ನಿಸುವ ಧೈರ್ಯ ಯಾರಿಗಿತ್ತು ? 'ಯಾರೇನು ಮಾಡುತ್ತಾರೆ' ? ಎಂಬ ಆತನ ಭಂಡಧೈರ್ಯ ಬಲವಾಗಲು ಕಾರಣ. ಯಾರೂ ಆತನ ಈ ದುರ್ನಡತೆಯ ಬಗ್ಗೆ ಸಾರ್ವಜನಿಕವಾಗಿ ಸೊಲ್ಲೆತ್ತಲು ಸಿದ್ಧವಿರಲಿಲ್ಲ ಎಂಬುದು.

ರೂಪನ್, ಗಿಲ್ ಅವರ ವಿರುದ್ಧ ಕೇಸ್ ಫೈಲ್ ಮಾಡಿದರು. ಆದರೆ ಈ ಕೇಸ್ ಬಹಳಷ್ಟು ವಾದ-ವಿವಾದಗಳಿಗೆ ಹುಟ್ಟು ಕೊಟ್ಟಿತು. ತಲ್ವೀನ್ ಸಿಂಗ್ ಅಂಥಹ ಮಹಿಳಾ ಅಂಕಣಕಾರರು 'ಏನು ಒಂದಿಷ್ಟು ನಿತಂಬ ಸವರಿದ್ದು ಮಹಾ' ಎಂಬ ಧಾಟಿಯಲ್ಲಿ, ಇದೊಂದು ಕ್ಷುಲ್ಲಕ ಕೇಸು ಎಂಬಂತೆ ಬರೆಯುವುದು ನಿಜಕ್ಕೂ ದಿಗ್ಭ್ರಮೆ ಹುಟ್ಟಿಸುತ್ತದೆ.

ಭಾರತದಲ್ಲಿ ಲೈಂಗಿಕ ಸಂಬಂಧ ಅಪರಾಧಗಳು ಬೆಳಕಿಗೆ ಬರುವುದೇ ಅಪರೂಪ. ಅದರಲ್ಲೂ ಮಧ್ಯಮ ಮತ್ತು ಮೇಲ್ಮಧ್ಯಮ ವರ್ಗದ ಮಹಿಳೆಯರು ತಮ್ಮ ಮೇಲೆ ನಡೆದ ಲೈಂಗಿಕ ಅಪರಾಧಗಳನ್ನು ಬಯಲು ಮಾಡಲು ಹಿಂಜರಿಯುತ್ತಾರೆ. ಲೈಂಗಿಕ ಅಪರಾಧ, ಅತ್ಯಾಚಾರಗಳ ಬಗ್ಗೆ ದೂರು ನೀಡುವವರಲ್ಲಿ ನೂರಕ್ಕೆ 99 ಜನ ಬಡ ವರ್ಗಕ್ಕೆ ಸೇರಿದವರು, ಇಲ್ಲ ಅಪ್ರಾಪ್ತ ವಯಸ್ಕರು ಎನ್ನುತ್ತಾರೆ ಪಬ್ಲಿಕ್ ಪ್ರಾಸಿಕ್ಯೂಟರ್ ವಸಂತಿ ಜೋಷಿ. ಇದೇ ಕಾರಣಕ್ಕೆ ಉದ್ಯೋಗಸ್ಥ ಮಹಿಳೆಯರು ತಮ್ಮ ಮೇಲಿನ ಹಿರಿಯ ಅಧಿಕಾರಿಗಳ ದೈನಂದಿನ ಕಿರುಕುಳವನ್ನು, ಸದ್ದಿಲ್ಲದೆ ಸಹಿಸುತ್ತಾರೆ.

ಲೈಂಗಿಕ ಹಿಂಸೆಗಳಲ್ಲಿ ಅತ್ಯಾಚಾರವೇನೋ ಥಟ್ಟನೆ ಎಲ್ಲರಿಗೂ ಅರ್ಥವಾಗುತ್ತದೆ, ಆದರೆ ಉಳಿದಂತೆ ಹೆಣ್ಣು ಎದುರಿಸುವ ಲೈಂಗಿಕ ಅಪಮಾನಕ್ಕೆ ಸಂಬಂಧಿಸಿದ ಸ್ತ್ರೀ ಸಮಸ್ಯೆಗಳತ್ತ ನಮ್ಮ ಕಾನೂನು ಮತ್ತು ಸಮಾಜ ಸ್ಪಂದಿಸುವುದು ಅಪರೂಪವೇ. ತಮಗಿಂತ ಉನ್ನತ ಅಧಿಕಾರದಲ್ಲಿರುವ ಹೆಣ್ಣನ್ನೂ ಸಾರ್ವಜನಿಕವಾಗಿ, ಆಕೆಯ ಪತಿಯ ಎದುರೇ ಲೈಂಗಿಕವಾಗಿ ಛೇಡಿಸಬಲ್ಲ ಆ ಧೈರ್ಯ ಪುರುಷನಿಗಿದೆಯೆಂದರೆ, ನಮ್ಮ ಪಿತೃಪ್ರಧಾನ ಸಮಾಜದಲ್ಲಿ ಮಹಿಳೆಯ ಸ್ಥಾನ-ಮಾನ, ಆಕೆಯ ಸುರಕ್ಷಣೆಯೇ ದೊಡ್ಡ ಪ್ರಶ್ನೆಯಾಗಿ ನಿಲ್ಲುತ್ತದೆ. ಎಲ್ಲರೆದುರು ಅಸಭ್ಯವಾಗಿ ವರ್ತಿಸಿಯೂ ಪಾರಾಗುವ ಬಗೆ, ಪುರುಷನ ಲೈಂಗಿಕ ಚಾಳಿಗಳಿಗೆ ಸಿಗುವ ರಿಯಾಯಿತಿ, ದಿಗಿಲು ಹುಟ್ಟಿಸುವಂಥದ್ದು. ಇಂಥಾ ಧೋರಣೆಯ ವಿರುದ್ಧ ಸಿಡಿದೆದ್ದ

ಮನವಿ

ಕಳೆದ ಹನ್ನೆರಡು ವರ್ಷಗಳಿಂದ ನಿರಂತರವಾಗಿ ನಡೆದುಬರುತ್ತಿರುವ ಪತ್ರಿಕೆಯಾದ 'ಅಚಲ' ಮಹಿಳಾ ಜಾಗೃತಿಯ ಧ್ಯೇಯಕ್ಕೆ ಬದ್ಧವಾಗಿರುವ ದ್ವೈಮಾಸಿಕ. ಕರ್ನಾಟಕದ ಎಲ್ಲ ಭಾಗಗಳಲ್ಲಿ ನಮ್ಮ ಚಂದಾದಾರರಿದ್ದಾರೆ; ನಾಡಿನ ಅನೇಕ ಹಿರಿಯ, ಕಿರಿಯ ಚಿಂತಕರು, ವಿಚಾರವಂತರು, ಸಾಹಿತಿಗಳು ಅಭಿಮಾನವಿಟ್ಟು ನಮ್ಮ ಪತ್ರಿಕೆಗೆ ಲೇಖನಗಳನ್ನು ಬರೆದುಕೊಟ್ಟಿದ್ದಾರೆ, ಕೊಡುತ್ತಿದ್ದಾರೆ. ಹೀಗಾಗಿ ಆರಂಭದಿಂದ ಇಂದಿನವರೆಗೆ ಒಂದು ಉನ್ನತ ಮಟ್ಟದ ವೈಚಾರಿಕ ಲೇಖನಗಳನ್ನು, ಸಂಶೋಧನಾ ವರದಿಗಳನ್ನು ಹಲವು ಸಾಮಾಜಿಕ ಸಮಸ್ಯೆಗಳ ಚರ್ಚೆಯನ್ನು ಮಹಿಳೆಯರ ದೃಷ್ಟಿಯಿಂದ ನಾವು ಪ್ರಕಟಿಸುತ್ತಾ ಬಂದಿದ್ದೇವೆ.

ಆದರೆ ಧ್ಯೇಯಬದ್ಧ ಮಹಿಳಾ ಪತ್ರಿಕೆಗಳೇ ಅಭಾವವಾಗಿರುವ ಈ ನಾಡಿನಲ್ಲಿ 'ಅಚಲ'ದಂಥ ಪತ್ರಿಕೆಗೆ ಎಷ್ಟು ಪ್ರೋತ್ಸಾಹ ದೊರೆಯಬೇಕೋ ಅದು ಇದುವರೆಗೂ ದೊರೆತಿಲ್ಲ. ಚಂದಾಹಣವಲ್ಲದೆ ಬೇರೆ ಯಾವ ಆದಾಯಗಳೂ ನಮ್ಮ ಪತ್ರಿಕೆಗೆ ಇಲ್ಲ. ಆದ್ದರಿಂದ ಓದುಗರಲ್ಲಿ ನಾವು ವಿನಮ್ರವಾಗಿ ಭಿನ್ನವಿಸಿಕೊಳ್ಳುವುದೇನೆಂದರೆ ದಯವಿಟ್ಟು ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ನಮ್ಮ ಪತ್ರಿಕೆಗೆ ಚಂದಾದಾರರಾಗಿರಿ. ಈಗಾಗಲೇ ಚಂದಾದಾರರಾಗಿರುವವರು ದಯವಿಟ್ಟು ನವೀಕರಿಸಿರಿ. ಮಹಿಳಾ ಪ್ರಗತಿಯಲ್ಲಿ ಕಳಕಳಿ ಹೊಂದಿರುವ ದಾನಿಗಳು ಉದಾರವಾಗಿ ದಾನನೀಡುವ ಮೂಲಕ ಈ ಪತ್ರಿಕೆ ಸದಾ ಉಳಿದು ಬರುವಂಥ 'ಸ್ಥಾಯಿನಿಧಿ' ಸ್ಥಾಪನೆಗೆ ನೆರವಾಗಬೇಕೆಂದು ಕೋರುತ್ತೇವೆ.

- ಸಂಪಾದಕ ಮಂಡಳಿ

Reg. No. MAG (5) PRC, DEGL 036/89/87
BOOK POST/Periodicals

To,
Sri / Smt.

If Undelivered please return to :
Jagruthi Mahila Adhyayana Kendra
401, Vijay Tower, 2nd Main, RPC Layout
Vijayanagar, II Stage, Bangalore-560 040.

ACHALA - Edited by N. Gayathri, Published by Dr. G. Ramakrishna on behalf of Jagruthi Mahila Adhyayana Kendra, 26, 1st Main Road, Vyalikaval, Bangalore-03. Typeset & Printing by **AKSHARA PRINTERS**, B'lore-4. Ph.: 624082